

## ನಮ್ಮ ಸುವರ್ಣ ಆಶಯ

ಮಹಾ ಬೋಧಿ ಸೊಸೈಟಿಯು 1956 ರಲ್ಲಿ ಪೂಜ್ಯ ಆಚಾರ್ಯ ಬುದ್ಧರಕ್ಷಿತರವರಿಂದ ಸ್ಥಾಪನೆಗೊಂಡು ಅವರ ಮಾರ್ಗದರ್ಶನದಲ್ಲಿ ಭಗವಾನ್ ಬುದ್ಧರು ಬೋಧಿಸಿದ ನಾಲ್ಕು ಪರಮ ಪವಿತ್ರ ಸತ್ಯಗಳನ್ನು , ಪಂಚಶೀಲಗಳನ್ನು , ಮಧ್ಯಮ ಮಾರ್ಗವನ್ನು , ಆಧ್ಯಾತ್ಮಿಕ ವಿಚಾರಗಳನ್ನು ಬೋಧಿಸುವುದರ ಜೊತೆಗೆ ಧಾರ್ಮಿಕ, ಶೈಕ್ಷಣಿಕ ಹಾಗು ಸಾಮಾಜೀಕ ಸೇವಾ ಕಾರ್ಯಗಳನ್ನು ನಡೆಸುತ್ತಾ ಬಂದಿದೆ.

2550 ನೇ ಪವಿತ್ರ ಬುದ್ಧ ಜಯಂತಿಯು ಹಾಗು ಮಹಾಬೋಧಿ ಸೊಸೈಟಿಯ ಸುವರ್ಣಜಯಂತಿ ಮತ್ತು ಸುವರ್ಣ ಕರ್ನಾಟಕ ಜಯಂತಿಗಳ ನೆನಪಿಗಾಗಿ ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆಯಲ್ಲಿ 50 ಕನ್ನಡ ಪುಸ್ತಕಗಳನ್ನು ಪ್ರಕಟಿಸುವ ಆಶಯ ವುಳ್ಳವರಾಗಿದ್ದೇವೆ.

ಮನುಕೂಲದ ಒಳಿತಿಗಾಗಿ ಭಗವಾನ್ ಬುದ್ಧರು ಉಪದೇಶಿಸಿದ ಸತ್ಯಗಳನ್ನು ಈ ಕಿರು ಕನ್ನಡದ ಪುಸ್ತಕಗಳಲ್ಲಿ ಸರಳ ಆಡುಭಾಷೆಯಲ್ಲಿ ಪ್ರಕಟಿಸಿ ಎಲ್ಲ ವಯೋಮಾನದವರಿಗೂ ಅರ್ಥವಾಗುವ ಪುಸ್ತಕಮಾಲಿಕೆ ಇದಾಗಲಿದೆ .

ಇಂದಿನ ಕಲುಷಿತ ಬದುಕಿನಿಂದ ನೆಮ್ಮದಿ ಕಳೆದುಕೊಂಡ ಮನಸುಗಳಿಗೆ ಸರಿ ತಪ್ಪುಗಳ ಅರಿವು ಮೂಡಿಸಿ ಸುಖ, ಶಾಂತಿ ಮತ್ತು ಜ್ಞಾನದ ದಾರಿದೀಪವಾಗಿ ಈ ಮಾಲಿಕೆ ಜನರ ಮನದಲ್ಲಿ ಸುವರ್ಣ ಬೆಳಕು ಚಲ್ಲಲಿ ಎನ್ನುವುದೆ ನಮ್ಮ ಆಶಯ.

Maha Bodhi Society,
14, Kalidasa Road,Gandhinagar, Bangalore - 560 009, India.
Tel: 080-22250684, Fax: 080-22264438, email: info@mahabodhi.info, www.mahabodhi.info

ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆ 17

# ವೈಜ್ಞಾನಿಕ ಯುಗದಲ್ಲಿ ಬೌದ್ಧ ಧರ್ಮ



ಪೂಜ್ಯ ಡಾ॥ ಕೆ. ಶ್ರೀ ಧಮ್ಮಾನಂದ

ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆ–17

# ವೈಜ್ಞಾನಿಕ ಯುಗದಲ್ಲಿ ಬೌದ್ಧ ಧರ್ಮ
## ಮತ್ತು
# ಧರ್ಮವು ಶಾಂತಿಯನ್ನು ನೀಡೀತೆ?

**ಪೂಜ್ಯ ಡಾ॥ ಕೆ. ಶ್ರೀ ಧಮ್ಮಾನಂದ**

**ಕನ್ನಡ ಅನುವಾದ : ಅನೀಶ್ ಬೋಧ್**

**ಬುದ್ಧ ವಚನ ಟ್ರಸ್ಟ್**
**ಮಹಾ ಬೋಧಿ ಸೊಸೈಟಿ**
ಗಾಂಧಿನಗರ, ಬೆಂಗಳೂರು–560 009

**Buddhism in Scientific Age** and
**Can Religion bring peace**
Written by
**Venerable Dr. K. Sri Dhammananda** and
translated into Kannada by **Aneesh Bodh**

**ಮೊದಲ ಕನ್ನಡ ಆವೃತ್ತಿ 2008 – 6000 ಪ್ರತಿಗಳು**

ಪ್ರಕಾಶನ :
**ಬುದ್ಧ ವಚನ ಟ್ರಸ್ಟ್**
14, ಕಾಳಿದಾಸ ಮಾರ್ಗ
ಗಾಂಧಿನಗರ, ಬೆಂಗಳೂರು–560 009
ದೂರವಾಣಿ : 080–22250684
ಫ್ಯಾಕ್ಸ್ : 080–22264438
E-mail : info@mahabodhi.info

ಮುಖಪುಟ ವಿನ್ಯಾಸ : **ಶ್ರೀ ಸಿ. ಚಂದ್ರಶೇಖರ**

ಮುದ್ರಕರು :
**ಶ್ರೀ ಅರವಿಂದ್ ಪ್ರಿಂಟರ್ಸ್**
ನಂ. 39, 7ನೇ ಅಡ್ಡರಸ್ತೆ, ಸರಸ್ವತಿಪುರ
ನಂದಿನಿ ಲೇಔಟ್, ಬೆಂಗಳೂರು–96
ದೂ : 23498198, ಮೊ : 9916461691

The printing of 6000 copies of this
Dhamma book
for free distribution is sponsored by

Subang Jaya Buddhist Association,
Malaysia

May all beings share in the merits of this
Dhamma-Dana.
May they be well and happy always.

Sadhu, Sadhu, Sadhu!

# ಮೊದಲ ಮಾತು

**ಸಬ್ಬದಾನಂ ಧಮ್ಮ ದಾನಂ ಜಿನಾತಿ ।**
**ಸಬ್ಬರಸಂ ಧಮ್ಮ ರಸಂ ಜಿನಾತಿ**

ಭಗವಾನ್ ಬುದ್ಧರು ಉಪದೇಶಿಸಿದ ಧಮ್ಮಪದದ ಮಾತು ಇದು. ಎಲ್ಲಾ ದಾನಕ್ಕಿಂತ ಧಮ್ಮ ದಾನವು ಶ್ರೇಷ್ಠ, ಎಲ್ಲಾ ರಸಸ್ವಾದಕ್ಕಿಂತ ಧಮ್ಮ ರಸಸ್ವಾದ ಪರಮಾನಂದದಾಯಕವಾದದ್ದು.



**ಪೂಜ್ಯ ಆಚಾರ್ಯ ಬುದ್ಧರಕ್ಖಿತ ಭಂತೇಜಿ**

ಹೌದು, ಸತ್ಯವಾಕ್ಯ ಇದು. ನಮ್ಮ ಇಡೀ ಬದುಕನ್ನು, ನಾವು ಜೀವಿಸುವುದು ಆನಂದದಿಂದ ಬಾಳುವುದಕ್ಕೆ. ಅದಕ್ಕೆ ಮೂಲ ಬದುಕಿನಲ್ಲಿ ಶೀಲ–ಸನ್ನಡತೆ, ಸದಾಚಾರ, ಶೀಲವಿದ್ದರೆ, ಸಮಾಧಾನ ಮತ್ತು ಸಂತೋಷ ತಾನಾಗಿಯೇ ಒದಗಿ ಬರುತ್ತವೆ.

ಕ್ರಿಸ್ತಪೂರ್ವ 3ನೇ ಶತಮಾನದಲ್ಲಿ ಬೌದ್ಧ ಮಹಾಸಾಮ್ರಾಟ ಅಶೋಕ, ನೆಮ್ಮದಿಯನ್ನು ಪಡೆದಿದ್ದು, ಆನಂದವನ್ನು ಹಂಚಿದ್ದ ಈ ಬೌದ್ಧ ಸರಣಗಳನ್ನು ಶೀಲಗಳನ್ನು ಪಾಲಿಸಿದ ಮೇಲೆಯೇ. ಆತನಂತಹ ಮಹಾದಾನಿ ಬೇರೆ ಯಾರೂ ಇಲ್ಲ. ಬುದ್ಧ ಧಮ್ಮದ ದೀಪವನ್ನು ಬಹುಜನ ಸುಖಾಯ, ಬಹುಜನ ಹಿತಾಯ, ವಿಶ್ವದ ಎಲ್ಲಕಡೆಯೂ ಹಚ್ಚಲಿಕ್ಕಾಗಿ ಆತ ತನ್ನ ಮಕ್ಕಳಾದ ಮಹಿಂದ ಮತ್ತು ಸಂಘಮಿತ್ರರನ್ನು ಸಂಘಕ್ಕೆ ದಾನ ಮಾಡಿದ. ಹಾಗೆಯೇ ಭಾರತದ ಉದ್ದಗಲಕ್ಕೂ 84,000 ಸ್ತೂಪಗಳನ್ನು ಕಟ್ಟಿಸಿದ. ಮಹಿಷ ಮಂಡಲ – ಈ ನಮ್ಮ ಕರ್ನಾಟಕಕ್ಕೂ ಪೂಜ್ಯ ಯೋನ ರಕ್ಖಿತ



ಎನ್ನುವ ಭಿಕ್ಖುವನ್ನು ಕಳುಹಿಸಿದ್ದ. ಭಾರತದಲ್ಲಿ ಬೆಳಗಿದ ಈ ಬುದ್ಧ ಬೆಳಕು, ಇಡೀ ವಿಶ್ವಕ್ಕೆ ಬೆಳಕಾಗಿ ವಿಶ್ವಜ್ಯೋತಿಯಾಯಿತು. ಶಾಂತಿಯ ತಂಪನ್ನರೆಯಿತು.

ಅದೇ ಕೆಲಸವನ್ನು ಮುಂದುವರೆಸಿ 1956ರಲ್ಲಿ ಪೂಜ್ಯ ಆಚಾರ್ಯ ಬುದ್ಧರಕ್ಖಿತ ಭಂತೇಜಿಯವರು ಬೆಂಗಳೂರಿನಲ್ಲಿ ಮಹಾಬೋಧಿ ಸಂಸ್ಥೆ ಕಟ್ಟಿದರು. ಬುದ್ಧಜ್ಞಾನ ದೀಪವನ್ನು ಹಿಡಿದು–ಐವತ್ತು ವರ್ಷ ಕರ್ನಾಟಕದಲ್ಲಿ ಅಡ್ಡಾಡಿದರು. ಈಗ ಈ ಸಂಸ್ಥೆಗೆ – ಆ ಬಹುಜನ ಸೇವೆಗೆ – ಸುವರ್ಣ ಜಯಂತಿ ಉತ್ಸವ. ಇಂತಹ ಚಿನ್ನದ ಹಬ್ಬದ ಸಂದರ್ಭದಲ್ಲಿ ಕರ್ನಾಟಕದ ಮನೆಮನೆಗೆ, ಕನ್ನಡದ ಮನಕ್ಕೆ ಒಂದೊಂದು ಬುದ್ಧ ವಚನದ ಸಂದೇಶದ ಹಣತೆಗಳನ್ನು, ಕೈಪಿಡಿಗಳನ್ನು ನೀಡಬೇಕೆಂದು ನಮ್ಮ ಭಂತೇಜಿಯವರ ಅಪೇಕ್ಷೆ. ಈ 50ರ ಹಬ್ಬದಲ್ಲಿ ಸುವರ್ಣ ಜಯಂತಿ ನೆನಪಿಗಾಗಿ – 50 ಕನ್ನಡ ಕೈಪಿಡಿಗಳನ್ನು ಪ್ರಕಟಿಸಿ, ಬುದ್ಧ ನೀಡಿದ ಉಪದೇಶವಾಣಿಯನ್ನು ಮನೆಗೆ – ಮನಕ್ಕೆ ಮುಟ್ಟಿಸುವ ಕಾರ್ಯದ ಕೃತಿ ಇದು.

ದಯಮಾಡಿ, ಸ್ವೀಕರಿಸಿ, ಭಗವಾನ್ ಬುದ್ಧರ ಮಹಾಕರುಣೆಯು, ನಿಮಗೆ ಸುಖ–ಶಾಂತಿ ಸಮೃದ್ಧಿಯನ್ನು ಹರಸಲಿ ಎಂದು ಹಾರೈಸುತ್ತೇವೆ.

*ಶುಭಾಶಯಗಳೊಡನೆ*

**ಪೂಜ್ಯ ಭಂತೇಜಿಗಳು, ಉಪಾಸಕ/ಉಪಾಸಕಿಯರು**
**ಮಹಾಬೋಧಿ ಸಂಸ್ಥೆಗಳು**

# ಪರಮಪೂಜ್ಯ ಡಾ॥ ಕೆ. ಶ್ರೀ ಧಮ್ಮಾನಂದ ನಾಯಕ ಮಹಾಥೇರ



"ಯಾರ ಆಕಾಂಕ್ಷೆಗಳು, ಸದಾ ಉದಾತ್ತ ವಾಗಿರುತ್ತದೋ, ಯಾರು ಪರರ ಜೀವನ ಗಳನ್ನು ಸಾರಯುತವನ್ನಾಗಿ ಮಾಡಿರು ವರೋ, ಯಾರು ಪರರ ಜೀವನಗಳಲ್ಲಿ ಶಾಂತಿಯನ್ನು ತರುವವರಾಗಿದ್ದಾರೋ, ಯಾರು ಈ ಜಗವನ್ನು ಜೀವಿಸಲು ಉತ್ತಮವನ್ನಾಗಿ ಮಾಡಿರುವರೋ ಯಾರ ಎಲ್ಲಾ ಕಾರ್ಯಗಳು ಸದಾ ಮೈತ್ರಿಯಿಂದ ಕೂಡಿರುವುದೋ ಮತ್ತು ಯಾರು ಸದಾ ಮುದಿತಾದಲ್ಲೆ ಆನಂದಿಸು ವರೋ ಅಂತಹವರು ಸದಾ ಆನಂದವಾಗಿ ಸುಖವಾಗಿ ಇರುತ್ತಾರೆ".

ಇದಕ್ಕೆ ಉದಾಹರಣೆ ಎನಿಸಿದಂತಹ ಈ ಮಹಾ ಪುರುಷರೇ ಡಾ॥ ಕೆ. ಶ್ರೀ ಧಮ್ಮಾನಂದರವರು. ಶ್ರೀಯುತರು 18ನೇ ಮಾರ್ಚ 1919ರಲ್ಲಿ ಶ್ರೀಲಂಕದ ಕಿರಿಂದೆ ಎಂಬ ಹಳ್ಳಿಯಲ್ಲಿ ಜನಿಸಿದರು. ಬಾಲ್ಯದಿಂದಲೇ ಬೌದ್ಧಾಸಕ್ತಿ ಹೊಂದಿದ್ದು 12ನೇ ವಯಸ್ಸಿಗೆ ಪೂಜ್ಯ ಕೆ. ಧಮ್ಮರತನ ಮಹಾಥೇರ ಅವರಿಂದ ಸಾಮಣೇರ ದೀಕ್ಷೆ ಪಡೆದರು. 22ನೇ ವಯಸ್ಸಿಗೆ ಉಪಸಂಪದ ಪಡೆದರು. ಇವರು ಶ್ರೀಲಂಕದ ಹಿರಿಯ ಅನೇಕ ನಾಯಕ ಥೇರರಿಂದ ಶಿಕ್ಷಣ ಪಡೆದು, 26ನೇ ವಯಸ್ಸಿಗೆ ಪಾಳಿ ತಿಪಿಟಕದಲ್ಲಿ ಡಿಪ್ಲೊಮಾ ಪಡೆದರು. 1945ರಲ್ಲಿ ಬನಾರಸ್ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದರು. 1949ರಲ್ಲಿ ಎಂ.ಎ. ಪಡೆದರು. ಭಾರತದ ರಾಷ್ಟ್ರಪತಿ ಯಾಗಿದ್ದ ರಾಧಾಕೃಷ್ಣನ್‌ರವರ ಆಶ್ರಯದಲ್ಲಿ ಸಂಸ್ಕೃತ, ಹಿಂದಿ ಮತ್ತು ಭಾರತದ ತತ್ವಶಾಸ್ತ್ರದಲ್ಲಿ ಅಧ್ಯಯನ ನಡೆಸಿದರು. 'ಶಾಸ್ತ್ರೀಯ' ಪದವಿ ಪಡೆದರು.

ನಂತರ ಬೌದ್ಧ ಧಮ್ಮದ ಉನ್ನತಿಗೆ ನಿರಂತರ ಶ್ರಮಿಸಿದರು. ಹಲವಾರು ಸಂಸ್ಥೆಗಳನ್ನು ಕಟ್ಟಿದರು. ಹಲವಾರು ಬೌದ್ಧ ಸಂಸ್ಥೆಗಳಿಗೆ ಪ್ರಧಾನ ಸಲಹಾಕಾರರು ಆದರು. ಬಹಳಷ್ಟು ಗ್ರಂಥಗಳನ್ನು ಬರೆದರು.



ಬೌದ್ಧ ಜಗತ್ತಿಗೆ ನಾಯಕರಂತೆ ಬೆಳಗಿದರು. ಅವರು ಅನೇಕ ಪದವಿ ಪಾರಿತೋಷಕಗಳನ್ನು ಪಡೆದರು. ಉದಾಹರಣೆಗೆ ಶಾಸ್ತ್ರೀಯ, ಧಮ್ಮಕೀರ್ತಿ, ಶ್ರೀ ಸದ್ಧಮ್ಮ ವಿಶಾರದ, ಪರಿಯತ್ತಿ ವಿಶಾರದ, ತಿಪಿಟಕಾ, ವಗಿಸ್ವರಚಾರ್ಯ ಮಹೋಪಾಧ್ಯಾಯ, ಬುದ್ಧಶಾಸನ ವಿಭೂಷಣ, ದರ್ಶನ ವಿಶಾರದ, ಸಾಹಿತ್ಯ ಚಕ್ರವರ್ತಿ, ಸಧಮ್ಮ ಪ್ರವತ್ರಿಕಾ ಚಕ್ರವರ್ತಿ, ಪಿ.ಹೆಚ್.ಡಿ.ಗಳು ಇತ್ಯಾದಿ ಪದವಿಗಳನ್ನು ಬಿರುದುಗಳನ್ನು ದೇಶ ವಿದೇಶಗಳಲ್ಲಿ ಪಡೆದರು.

ಶ್ರಿಯುತ ಧಮ್ಮಾನಂದರವರು ಆಧುನಿಕ ಬೌದ್ಧ ಜಗತ್ತಿನಲ್ಲಿ ನಾಯಕರಂತೆ ವಿಜೃಂಭಿಸಿದರು. ಅವರು ಶಾಸನ ಅಭಿವೃದ್ಧಿ ವರ್ಧನಾ ಸೊಸೈಟಿ, ಮಲೇಶಿಯಾದ ಯುವ ಬೌದ್ಧ ಮಂಡಲಿ, ಮಾನವತಾ ತತ್ವ ಸ್ನೇಹ ಗುಂಪಿಗೆ, ವಿದ್ಯಾವರ್ಧನಾ ಪಿರಿವೇಣ ಶ್ರೀಲಂಕಗೆ ಆಶ್ರಯದಾತ ರಾಗಿದ್ದಾರೆ. ಮಲೇಶಿಯಾದ ಬುದ್ಧಿಷ್ಟ್ ಮಿಷನರಿ ಸೊಸೈಟಿಯ ಧಾರ್ಮಿಕ ನಿರ್ದೇಶಕರು, ಸ್ಥಾಪಕರು ಮತ್ತು ಪ್ರಧಾನ ಸಲಹಾಕಾರರು ಆಗಿದ್ದರು. ಅವರು 50ಕ್ಕೂ ಹೆಚ್ಚು ಬೌದ್ಧ ಸಂಸ್ಥೆಗಳಿಗೆ ಪ್ರಧಾನ ಸಲಹಕಾರ ಆಗಿದ್ದರು. ಮಲೇಶಿಯಾ, ಸಿಂಗಪೂರ, ಶ್ರೀಲಂಕದ ಸಂಘ ಕೌನ್ಸೆಲ್‌ಗೆ ಅಧ್ಯಕ್ಷರಾಗಿದ್ದರು. ಹಾಗು ಹಲವಾರು ದೇಶ ವಿದೇಶ ಸಂಸ್ಥೆಗಳಿಗೆ ನಿರ್ದೇಶಕರು, ಛೇರ್‌ಮನ್, ಸಲಹಾಕಾರರು ಆಗಿದ್ದರು.

ಎಲ್ಲಕ್ಕಿಂತ ಹೆಚ್ಚಾಗಿ ಅವರು ಅದ್ವಿತೀಯ ಲೇಖಕರಾಗಿದ್ದರು. ಸ್ವತಂತ್ರ ಶೈಲಿಯಲ್ಲಿ ಅವರು ಬೌದ್ಧ ದರ್ಶನಗಳನ್ನು ಬರೆದರು. ದೇಶ ವಿದೇಶಗಳಲ್ಲಿ ಧಮ್ಮವನ್ನು ಹರಡಿದರು. ಬೌದ್ಧ ಧಮ್ಮಕ್ಕಿರುವ ಮಿಥ್ಯಾ ಅಪವಾದಗಳನ್ನು ದೂರಿಕರಿಸಿದರು. ಅಲ್ಪ ಕಾಲದಲ್ಲೇ ಅವರು ಶ್ರೀಲಂಕ, ಬರ್ಮ, ಸಿಂಗಪೂರ, ಮಲೇಶಿಯಾ, ಥೈಲ್ಯಾಂಡ್, ಥೈವಾನ್, ಜಪಾನ್, ನ್ಯೂಜಿಲ್ಯಾಂಡ್, ಇಂಗ್ಲೆಂಡ್, ಅಮೇರಿಕಾದಲ್ಲೂ ಅವರು ಜನಪ್ರಿಯತೆ ಪಡೆದರು.

ಪೂಜ್ಯ ಶ್ರೀ ಧಮ್ಮಾನಂದ ಥೇರರು 31ನೇ ಆಗಸ್ಟ್ 2006ರಂದು ಇಹಲೋಕ ತ್ಯಜಿಸಿದರು.

# ವೈಜ್ಞಾನಿಕ ಯುಗದಲ್ಲಿ ಬೌದ್ಧ ಧರ್ಮ

ನಾವಿಂದು ಎಂಥಹ ವೈಜ್ಞಾನಿಕ ಯುಗದಲ್ಲಿ ಇದ್ದೇವೆ ಎಂದರೆ ನಮ್ಮ ಜೀವನಗಳ ಎಲ್ಲಾ ರಂಗಗಳಲ್ಲಿಯೂ ವಿಜ್ಞಾನವು ಪ್ರಭಾವ ಬೀರಿದೆ. ಹದಿನೇಳನೇ ಶತಮಾನದಿಂದ ಪ್ರಾರಂಭವಾದ ವೈಜ್ಞಾನಿಕ ಕ್ರಾಂತಿಯು ನಿಲ್ಲದೆ ನಿರಂತರ ಪ್ರಚಂಡ ಪ್ರಭಾವವನ್ನು ಬೀರಿದೆ. ಅದು ನಮ್ಮ ಕ್ರಿಯೆಗಳಲ್ಲಿ ಹಾಗು ಯೋಚನೆಗಳಲ್ಲಿ ಹಾಸುಹೊಕ್ಕಿದೆ.

ವೈಜ್ಞಾನಿಕ ಪರಿಣಾಮವು ಪ್ರಬಲವಾಗಿ ನಿರ್ಧಿಷ್ಟವಾಗಿ ಸಾಂಪ್ರದಾಯಿಕ ಧಾರ್ಮಿಕ ನಂಬಿಕೆಗಳ ಮೇಲೆ ಬೀರಿದೆ. ಬಹಳಷ್ಟು ಮೂಲ ಧರ್ಮಗಳ ಭಾವನೆಗಳು ಆಧುನಿಕ ವಿಜ್ಞಾನದ ಒತ್ತಡಕ್ಕೆ ಪುಡಿಪುಡಿಯಾಗಿವೆ. ಹಾಗು ಆ ಎಲ್ಲಾ ನಂಬಿಕೆಗಳು ಈಗ ವಿಚಾರವಾದಿಗಳು ಸ್ವೀಕಾರ ಮಾಡುವ ಸ್ಥಿತಿಯಲ್ಲಿಲ್ಲ ಹಾಗು ಬಹು ಮಾಹಿತಿಯುಳ್ಳ ವ್ಯಕ್ತಿಯು ಒಪ್ಪಲಾರ. ಕೇವಲ ಬ್ರಹ್ಮಜ್ಞಾನದ ಊಹಾಪೋಹಗಳಿಂದಾಗಲಿ ಅಥವಾ ಧರ್ಮಗ್ರಂಥಗಳ ಪ್ರಮಾಣದಿಂದಾಗಲಿ ಸತ್ಯಗಳನ್ನು ಪ್ರತಿಪಾದಿಸುವ ಕಾಲ ಈಗ ಉಳಿದಿಲ್ಲ. ಈಗ ಪ್ರತಿಯೊಂದು ವೈಜ್ಞಾನಿಕ ವಿಚಾರಶೀಲತೆಯಲ್ಲಿ ಅಳೆಯುತ್ತಾರೆ. ಈಗ ವಿಜ್ಞಾನ ಹಾಗು ಧರ್ಮ ಪ್ರತ್ಯೇಕವಾಗಿದೆ.  ಉದಾಹರಣೆಗೆ ಆಧುನಿಕ ಮನಶಾಸ್ತ್ರಜ್ಞನು ಸೂಚಿಸುವುದು ಏನೆಂದರೆ ಮನಸ್ಸು ದೇಹದಂತೆ ಸ್ವಾಭಾವಿಕವಾಗಿ ಕಾರ್ಯ ಕಾರಣಿಯ ನಿಯಮದಂತಿವೆ. ಕೆಲವು ಧರ್ಮಗಳು ಹೇಳುವಂತೆ ಬದಲಾಗದ ಆತ್ಮವನ್ನು ಹೊಂದಿಲ್ಲ ಎಂದು ದೃಢೀಕರಿಸಿದ್ದಾರೆ.

ಕೆಲವು ಧರ್ಮದವರು ವೈಜ್ಞಾನಿಕ ಸಂಶೋಧನೆಗಳನ್ನು ಪರಿಗಣಿಸು ವುದಿಲ್ಲ. ಏಕೆಂದರೆ ಅವರ ಧಾರ್ಮಿಕ ಸಿದ್ಧಾತಗಳಿಗೆ ಘರ್ಷಿಸಬಹುದೆಂದು ಭಾವಿಸುತ್ತಾರೆ (ಭೀತಿಪಡುತ್ತಾರೆ) ಅಂತಹ ಹಠಮಾರಿತನದ ಮನೋಭಾವವು ಮಾನವನ ಉನ್ನತಿಗೆ ತಡೆಯಾಗಿದೆ.  ಆಧುನಿಕ ಮಾನವ ಪರೀಕ್ಷೆಯ ವಿನಃ ಅಂಧನಾಗಿ ಏನ್ನನ್ನೂ ಒಪ್ಪದಿದ್ದರೂ ಸಹ ಕೆಲವು ಧರ್ಮದವರು



ತಮ್ಮ ಸಿದ್ಧಾಂತ ಪ್ರತಿಪಾದನೆಗೆ ತಮ್ಮ ಅನುಯಾಯಿಗಳ ಸಂಖ್ಯೆಗಳನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಇನ್ನೊಂದೆಡೆ ಕೆಲವು ಧರ್ಮದವರು ವಿಜ್ಞಾನದ ಸಿದ್ಧಾಂತಗಳ ಜನಪ್ರಿಯತೆ ಕಂಡು ಅವುಗಳ ಅಗತ್ಯತೆಯನ್ನು ಅರಿತು ತಮ್ಮ ಧರ್ಮದ ನಂಬಿಕೆಗಳಿಗೆ ವಿಜ್ಞಾನವನ್ನು ಹೊಂದಿಸಿಕೊಂಡು ಹೊಸ ವಿವರಣೆಗಳನ್ನು ನೀಡಲಾರಂಭಿಸಿದ್ದಾರೆ.  ಉದಾಹರಣೆಗೆ ಡಾರ್ವಿನ್‌ನ್ನ ವಿಕಾಸವಾದದ ಸಿದ್ಧಾಂತವನ್ನೇ ತೆಗೆದುಕೊಳ್ಳಿ. ಬಹಳಷ್ಟು ಧರ್ಮದವರು ಮಾನವನು ನೇರವಾಗಿ ದೇವರಿಂದ ಸೃಷ್ಟಿಸಲ್ಪಟ್ಟ ಎಂದೇ ತಿಳಿಸಿದ್ದರು. ಇನ್ನೊಂದೆಡೆ ಡಾರ್ವಿನ್‌ನು ಮಾನವನು ಮಂಗನಿಂದಾದ ಎಂದು ಪ್ರತಿಪಾದಿಸಿದನು. ಈ ಸಿದ್ಧಾಂತವು ದಿವ್ಯಸೃಷ್ಟಿಯ ಮತ್ತು ಮಾನವನ ಉಗಮದ ಎಲ್ಲಾ ಸಿದ್ಧಾಂತಗಳನ್ನು ಅಲ್ಲಾಡಿಸಿತು. ಅಂದಿನಿಂದ ಎಲ್ಲಾ ಚಿಂತನಾಕಾರರು ಡಾರ್ವಿನ್‌ನ ಸಿದ್ಧಾಂತವನ್ನು ಸ್ವೀಕರಿಸಿದರು. ಈಗಿರುವ ಆಧ್ಯಾತ್ಮದವರಿಗೆ ಬಹುಕಾಲದಿಂದ ವಿರೋಧಿಸಿದ ಈ ಸಿದ್ಧಾಂತದಿಂದ ಪಾರಾಗಲು ಹೊಸ ನಿರೂಪಣೆಯನ್ನು ನೀಡಿ ಅದನ್ನು ಹೊಂದಿಸಿಕೊಂಡರು. ಅದು ಬಿಟ್ಟರೆ ಅವರಿಗೆ ಬೇರೆ ದಾರಿಯೇ ಇಲ್ಲದಂತಾಗಿದೆ.

ಆಧುನಿಕ ವೈಜ್ಞಾನಿಕ ಸಂಶೋಧನೆಗಳ ಬೆಳಕಿನಲ್ಲಿ ಹಲವಾರು ಧರ್ಮಗಳ ಬ್ರಹ್ಮಾಂಡ ಮತ್ತು ಜೀವನದ ಬಗೆಗಿದ್ದ ಸಾಂಪ್ರದಾಯಿಕ ಚಿಂತನೆಗಳನ್ನು ಅರಿಯುವುದು ಕಷ್ಟವೇನು ಇಲ್ಲ, ಅವೆಲ್ಲವೂ ಈಗ ಸೋತಿದೆ.  ಮಾನವನ ಅಭಿವೃದ್ಧಿಗೆ ಮತ್ತು ಪ್ರಗತಿಗೆ ಧರ್ಮಗಳು ಅಪಾರ ಕಾಣಿಕೆ ನೀಡಿದೆ ಎನ್ನುವುದು ಸಹಾ ಅಷ್ಟೇ ಗಮನಾರ್ಹ ಸತ್ಯವಾಗಿದೆ.  ಅವರು ಮಾನವನ ಜೀವನಕ್ಕೆ ಹಲವಾರು ಮೌಲ್ಯಗಳನ್ನು, ಪ್ರಮಾಣಗಳನ್ನು ವರ್ಗಗಳನ್ನು, ತತ್ವಗಳನ್ನು ನೀಡಿದರು. ಇಷ್ಟೆಲ್ಲಾ ಒಳಿತನ್ನು ಅವರು ಮಾಡಿದರೂ ಸಹಾ ಆಧುನಿಕ ವೈಜ್ಞಾನಿಕ ಯುಗದಲ್ಲಿ ಧರ್ಮಗಳು ಬಹಳಕಾಲ ಉಳಿಯುವುದಿಲ್ಲ. ಏಕೆಂದರೆ ಅವರು ಸತ್ಯಗಳನ್ನು ಬಂಧನದಲ್ಲಿಟ್ಟು ವಿಧಿಗಳನ್ನು ಮತ್ತು ಸಿದ್ಧಾಂತಗಳನ್ನು, ಸಂಸ್ಕಾರಗಳನ್ನು, ಮೌಢ್ಯಗಳನ್ನು ಪ್ರೋತ್ಸಾಹಿಸಿದಾಗ ಆ ವಿಧಿಗಳ ನಿಜ ಅರ್ಥವೇ ಬರಿದಾಗಿದೆ.

## ಬೌದ್ಧ ಧರ್ಮ ಮತ್ತು ವಿಜ್ಞಾನ

ಕಳೆದ ಶತಮಾನದ ಪ್ರಾರಂಭದವರೆಗೂ ಬೌದ್ಧ ಧರ್ಮವು ಆಧುನಿಕ ವಿಜ್ಞಾನವುಳ್ಳ ದೇಶಗಳನ್ನು ಮುಟ್ಟದೆ ಮಿತಿಯಲ್ಲೇ ಇತ್ತು. ಆದರೂ ಪ್ರಾರಂಭದಿಂದಲೂ ಬುದ್ಧರ ಬೋಧನೆಯು ಎಂದೆಂದಿಗೂ ವೈಜ್ಞಾನಿಕ ರೀತಿಯಲ್ಲೇ ಆರಂಭವಾಗುತ್ತಿತ್ತು.

ಬುದ್ಧ ಭಗವಾನರ ಬೋಧನೆಯು ವೈಜ್ಞಾನಿಕ ಅರ್ಥಗಳಿಗೆ, ವೈಜ್ಞಾನಿಕ ಉತ್ಸಾಹಗಳಿಗೆ ಏಕೆ ಅಪ್ಪುವುದೆಂದರೆ ಬುದ್ಧರು ಎಂದಿಗೂ ಗಡುಸು, ಹಠವಾದಿತರಹ ಸೈದ್ಧಾಂತಿಕ ನಿಲುವನ್ನು ಹೊಂದಿರಲಿಲ್ಲ. ಅವರ ಬೋಧನೆಗಳಿಗೆ ಆಧಾರ, ನಂಬಿಕೆ, ವಿಶ್ವಾಸ, ಅಥವಾ ದೇವವಾಣಿ, ಅಪೌರಷ್ಟೇಯವಾಗಿರಲಿಲ್ಲ. ಬದಲಾಗಿ ಚಿಂತನೆಯ ಸ್ವಾತಂತ್ರ್ಯವಿತ್ತು ಮತ್ತು ಅಪಾರ ನಮ್ಯವಾದ, ಬಾಗುವಂತಹ ಚಿಂತನಾಶೀಲತೆಯಿತ್ತು.

ಎರಡನೆಯ ಕಾರಣವೇನೆಂದರೆ ವೈಜ್ಞಾನಿಕ ನಿಜ ಅರ್ಥಗಳು ಬುದ್ಧರ ಸಾರ್ವತ್ರಿಕ ಸತ್ಯಗಳ ಸಾಮಿಪ್ಯದಲ್ಲಿ ಹುಡುಕಬಹುದಿತ್ತು. ಬುದ್ಧರ ಸಂಶೋಧನಾ ವಿಧಾನವು ವಿಜ್ಞಾನಿಯು ಸತ್ಯವನ್ನು ಹುಡುಕುವ ರೀತಿಯಲ್ಲೇ ಇತ್ತು. ವಿಜ್ಞಾನಿಯು ಬಾಹ್ಯ ಜಗತ್ತನ್ನು ಪಕ್ಷಪಾತರಹಿತವಾಗಿ ವೀಕ್ಷಿಸುತ್ತಾನೆ ಮತ್ತು ಹಲವಾರು ಪ್ರಾಯೋಗಿಕ ಯಶಸ್ಸಿನ ನಂತರವೇ ವೈಜ್ಞಾನಿಕ ಸಿದ್ಧಾಂತವು ರೂಪುಗೊಳ್ಳುತ್ತಿತ್ತು. ಅಂತಹುದೇ (ಅದಕ್ಕೆ ಮೀರಿದ) ವಿಧಾನದಿಂದ 25 ಶತಮಾನಗಳ ಹಿಂದೆ ಬುದ್ಧರು ಆಂತರಿಕ ಜಗತ್ತನ್ನು ಯಾವ ರೀತಿಯಲ್ಲೂ ಅಂಟದೆ ಅರಿತರು. ಮತ್ತು ತಮ್ಮ ಶಿಷ್ಯರಿಗೆ ಈರೀತಿ ಪ್ರೋತ್ಸಾಹಿಸಿದರು. "ಯಾವ ಬೋಧನೆಯನ್ನು ಪೂರ್ಣವಾಗಿ ವಿಮರ್ಶಾತ್ಮಕವಾಗಿ ಸಂಶೋಧಿಸದೆ ಮತ್ತು ವ್ಯಕ್ತಿಗತವಾಗಿ ಅದರ ಸತ್ಯತೆಯನ್ನು ಪ್ರಮಾಣಿಸದೆ ಅವನ್ನು ಸ್ವೀಕರಿಸಬೇಡಿ". ಹೇಗೆ ಇಂದಿನ ವಿಜ್ಞಾನಿಯು ತನ್ನ ಸಂಶೋಧನೆಗಳು ಪರರಿಂದ ನಕಲು ಮಾಡಲಾಗುವುದಿಲ್ಲ ಎಂದು ಹೇಳುವುದಿಲ್ಲವೋ ಹಾಗೆಯೇ ಬುದ್ಧರು ಸಹಾ ತಮ್ಮ ಸಂಬೋಧಿಯ ಅನುಭವವು ಕೇವಲ ತಮಗಾಗಿಯೇ ಎಂದು ಹೇಳಿಲ್ಲ. ಹೀಗಾಗಿ ಅವರ ಸತ್ಯಸಾಮಿಪ್ಯತೆಯು ಇಂದಿನ ವಿಜ್ಞಾನಿಯನ್ನು



ಹೋಲುತ್ತದೆ. ಅವರು ಪ್ರಯೋಗಾತ್ಮಕವಾಗಿ, ವೈಜ್ಞಾನಿಕವಾಗಿ ಸಾಧಿಸುವಂತಹ ವಿಧಾನದಿಂದ ಅಂತಿಮ ಸತ್ಯವನ್ನು ಮತ್ತು ಸಂಬೋಧಿಯ ಅನುಭವವನ್ನು ಸ್ಥಾಪಿಸಿದರು.

ಯಾವಾಗಲೂ ಬೌದ್ಧ ಧಮ್ಮವು ವೈಜ್ಞಾನಿಕ ಅರ್ಥದಲ್ಲೇ, ಉತ್ಸಾಹದಲ್ಲೆ ಇತ್ತು. ಇದರ ಅರ್ಥ ವಿಜ್ಞಾನವು ಬೌದ್ಧ ಧರ್ಮಕ್ಕೆ ಸಮವೆಂದು ಪರಿಗಣಿಸಬಾರದು. ಇಂದು ವಿಜ್ಞಾನದ ಪ್ರಾಯೋಗಿಕ ಪರಿಶ್ರಮದಿಂದ ಮಾನವ ಜೀವನಗಳು ಹಿಂದೆಂದಿಗಿಂತಲೂ ಅದ್ಭುತವಾದ ವಸ್ತುಗಳಿಂದ ಸುಖ ಮತ್ತು ಸವಲತ್ತುಗಳನ್ನು ಪಡೆಯುತ್ತಿದ್ದಾರೆ. ಅಂತಹವುಗಳನ್ನು ಮಾನವ ಹಿಂದೆ ಸ್ವಪ್ನದಲ್ಲಿಯೂ ಯೋಚಿಸಿರಲಿಲ್ಲ. ಇಂದು ಮಾನವನು ವಿಜ್ಞಾನದ ಸಹಾಯದಿಂದ ಮೀನುಗಳಿಗಿಂತ ಚೆನ್ನಾಗಿ ಈಜಬಲ್ಲ. ಪಕ್ಷಿಗಳಿಗಿಂತ ಎತ್ತರಕ್ಕೆ ಹಾರಬಲ್ಲ, ಚಂದಿರನ ಮೇಲೆ ನಡೆಯಬಲ್ಲ. ಆದರೂ ವೈಜ್ಞಾನಿಕ ಜ್ಞಾನದ ಕ್ಷೇತ್ರವು ಸಾಂಪ್ರದಾಯಿಕವಾಗಿ ಪ್ರಾಯೋಗಿಕ ಪ್ರಮಾಣ್ಯದ ಮಿತಿಯಲ್ಲಿ ಸಂಕುಚಿತವಾಗಿವೆ ಮತ್ತು ವಿಜ್ಞಾನದ ಸತ್ಯವು ಸದಾ ಬದಲಾಗುತ್ತಿರುತ್ತದೆ. ಇನ್ನೊಂದು ಪ್ರಮುಖವಾದ ವಿಷಯವೇನೆಂದರೆ ವಿಜ್ಞಾನವು ಮಾನವನ ಮನಸ್ಸಿನ ನಿಗ್ರಹವಾಗಲಿ, ಪ್ರಭುತ್ವವಾಗಲಿ ನೀಡಿಲ್ಲ. ಅಷ್ಟೇ ಅಲ್ಲ, ವಿಜ್ಞಾನವು ನೈತಿಕ ನಿಯಂತ್ರಣಕ್ಕೂ ಒತ್ತು ನೀಡಿಲ್ಲ ಮತ್ತು ಜೀವನದ ಉದ್ದೇಶ ತಿಳಿಸಿಲ್ಲ. ವಿಜ್ಞಾನದಲ್ಲಿ ವಿಸ್ಮಯಕಾರಿ ವಸ್ತುಗಳ ಜಾಲ ಇರಬಹುದು. ಆದರೂ ನಿಜಕ್ಕೂ ವಿಜ್ಞಾನವು ಹಲವಾರು ಕೊರತೆಗಳನ್ನು ಒಳಗೊಂಡಿದೆ. ಹಲವಾರು ಮಿತಿಗಳನ್ನು ಹೊಂದಿದೆ, ಅಲ್ಲಿಂದ ಬೌದ್ಧ ಧರ್ಮವು ಎಷ್ಟು ಪಟ್ಟು ಮಿತಿಗಳನ್ನು ದಾಟಿದೆ.

## ವಿಜ್ಞಾನದ ಮಿತಿಗಳು

ಬಹಳಷ್ಟು ಬಾರಿ ನಾವು ವಿಜ್ಞಾನವು, ಏನೆಲ್ಲಾ ಮಾಡಬಹುದು ಎಂದು ಕೇಳಿದ್ದೇವೆ. ಆದರೆ ವಿಜ್ಞಾನವು ಏನೂ ಮಾಡಲಾರದು ಎಂಬುದು ಅತಿ ಅಲ್ಪವಾಗಿ ಕೇಳಿದ್ದೇವೆ. ವೈಜ್ಞಾನಿಕ ಜ್ಞಾನವು ಇಂದ್ರಿಯಗಳ ಮೂಲಕ ಸಿಗುವಂತಹ ಮಾಹಿತಿಗೆ ಮಾತ್ರ ಸೀಮಿತವಾಗಿದೆ. ಇದು ಇಂದ್ರಿಯಾತೀತ

ವಾಸ್ತವಿಕತೆಯನ್ನು ಅರಿಯಲು ಯತ್ನಿಸುವುದಿಲ್ಲ. ವೈಜ್ಞಾನಿಕ ಸತ್ಯವು ರಚಿತವಾಗಿರುವುದು ಇಂದ್ರಿಯಗಳಿಂದ ಹಾಗು ತಾರ್ಕಿಕ ವೀಕ್ಷಣೆಯಿಂದ. ಅದು ಆ ಮಾಹಿತಿಗಳು ನಿರಂತರ ಬದಲಾಗುತ್ತಿರುತ್ತದೆ. ಆದ್ದರಿಂದ ವೈಜ್ಞಾನಿಕ ಸತ್ಯವು ಸಾಪೇಕ್ಷ ಸಿದ್ಧಾಂತವಾಗಿದೆ. ಕಾಲವನ್ನು ಪರೀಕ್ಷಿಸಲು ನಿಲ್ಲಲು ಉದ್ದೇಶಿಸಿಲ್ಲ. ವಿಜ್ಞಾನಿಯು ಇದನ್ನು ಅರಿತು ಸದಾ ಹೊಸ ಸಿದ್ಧಾಂತ ಕಂಡುಹಿಡಿದು ಹಳೆಯದು ಎಸೆಯುತ್ತಿರುತ್ತಾನೆ. ಅಂದರೆ ಹಳೆಯದನ್ನು ತಿರಸ್ಕರಿಸುತ್ತಾ ಉತ್ತಮವಾದುದನ್ನು ಅದರ ಬದಲಿಗೆ ಇಡುತ್ತಾನೆ.

ವಿಜ್ಞಾನವು ಬಾಹ್ಯ ಜಗತ್ತನ್ನು ಅರಿಯಲು ಪ್ರಯತ್ನಿಸುತ್ತದೆ ಮತ್ತು ಅಪರೂಪವಾಗಿ ಮಾನವನ ಆಂತರ್ಯ ಜಗತ್ತಿನ ಮೇಲ್ಮೈಯನ್ನು ಕೆರೆದಿದೆ. ಮನಃಶಾಸ್ತ್ರದಂತಹ ವಿಜ್ಞಾನವು ಸಹ ನಿಜವಾಗಿ ಮಾನವನ ಆಳವನ್ನು ನೋಡಿಲ್ಲ. ಮಾನವನ ಮನಸ್ಸಿನ ಅವಿಶ್ರಾಂತತೆಗೆ ಇರುವ ಒಳ ಆಳಕಾರಣ ತಿಳಿಸಿಲ್ಲ. ಯಾವಾಗ ಮನುಷ್ಯನು ಹತಾಶೆ ತಾಳುತ್ತಾನೋ ಮತ್ತು ಜೀವನದಿಂದ ಜಿಗುಪ್ಸೆ ತಾಳುತ್ತಾನೋ ಮತ್ತು ಅವನ ಆಂತರ್ಯ ಜಗತ್ತು ಕ್ಷೋಭೆಯಿಂದ ಮತ್ತು ಅವಿಶ್ರಾಂತವಾಗಿ ಇರುತ್ತದೋ, ಅದಕ್ಕಾಗಿ ಇಂದಿನ ವಿಜ್ಞಾನವು ಆತನ ಸಹಾಯಕ್ಕಾಗಿ ಸಜ್ಜುಗೊಳಿಸಿಲ್ಲ. ಸಮಾಜ ವಿಜ್ಞಾನಗಳು ಮಾನವನ ಅಡುಗೆಯಂತೆ ವಾತಾವರಣವನ್ನು ತಂದು ಕೆಲವು ಹಂತದ ಸುಖ ನೀಡಿದೆ. ಆದರೆ ಮಾನವ ಪ್ರಾಣಿಯಂತಲ್ಲ. ಆತನಿಗೆ ಶಾರೀರಿಕ ಸುಖಕ್ಕಿಂತ, ಸವಲತ್ತಿಗಿಂತ ತನ್ನ ದಿನನಿತ್ಯದ ಅನುಭವಗಳಿಂದ ಉಂಟಾಗುವ, ದುಃಖಗಳ ಮತ್ತು ಹತಾಶೆಗಳ ವಿರುದ್ಧ ಹೋರಾಡಲು ಸಹಾಯ ಬೇಕಾಗಿದೆ.

ಇಂದು ಬಹಳಷ್ಟು ಜನರು ಭಯದಿಂದ, ಅವಿಶ್ರಾಂತಿಯಿಂದ ಮತ್ತು ಅಕ್ಷೇಮದಿಂದ ಪೀಡಿತರಾಗಿದ್ದಾರೆ. ಆದರೂ ವಿಜ್ಞಾನವು ಅವರಿಗೆ ನೆರವು ನೀಡಲು ವಿಫಲವಾಗಿದೆ.  ಸಾಮಾನ್ಯ ಜನರು ತಮ್ಮ ಮೃಗೀಯ ಸ್ವಭಾವದಿಂದ ಪ್ರಚೋದಿತರಾಗಿ ಸುಟ್ಟು ಹೋಗುತ್ತಿದ್ದಾರೆ. ಹೀಗಿರುವಾಗಲು ವಿಜ್ಞಾನವು ಅವರಿಗೆ ಮನಸ್ಸನ್ನು ನಿಯಂತ್ರಿಸಲು ಕಲಿಸುವಿಕೆಯಲ್ಲಿ ಅಸಮರ್ಥಗೊಂಡಿದೆ.

ವಿಜ್ಞಾನವು ಮಾನವನಿಗೆ ಉತ್ತಮನನ್ನಾಗಿ ಮಾಡಬಲ್ಲದೆ? ಮಾಡಬಲ್ಲವುವಂತಿದ್ದರೆ ವಿಜ್ಞಾನದಲ್ಲಿ ಅತ್ಯಂತ ಅಭಿವೃದ್ಧಿ ಹೊಂದಿದ



ರಾಷ್ಟ್ರಗಳಲ್ಲಿ ಏಕೆ ಹಿಂಸಾತ್ಮಕ ಚಟುವಟಿಕೆಗಳು ಹೆಚ್ಚಾಗಿವೆ? ಇಷ್ಟೆಲ್ಲಾ ವೈಜ್ಞಾನಿಕ ಉನ್ನತಿ ಸಾಧಿಸಿದ್ದರೂ ಮತ್ತು ಮಾನವನಿಗೆ ಲಾಭ ನೀಡಲಾಗಿದೆ ಎಂದು ಹೇಳುವುದು ನ್ಯಾಯವಲ್ಲ. ಏಕೆಂದರೆ ವಿಜ್ಞಾನವು ಮಾನವನ ಆಂತರ್ಯವನ್ನು ಮೂಲವಾಗಿ ಬದಲಾಯಿಸದೆ ಹಾಗೆಯೇ ಬಿಟ್ಟಿದೆ. ಕೇವಲ ಆತನ ಅವಲಂಬನೆಯನ್ನು ಮತ್ತು ಕೊರತೆಯ ವೇದನೆಗಳನ್ನು ಹೆಚ್ಚಿಸಿದೆ ಅಲ್ಲವೆ? ಜೊತೆಗೆ ಈ ರೀತಿಯಲ್ಲಿ ಮಾನವತೆಗೆ ಕ್ಷೇಮ ತರಲು ಸೋತಿದೆ. ಅಷ್ಟೇ ಅಲ್ಲ, ಇಡೀ ವಿಶ್ವವು ಇಡಿಯಾಗಿಯೇ ನಾಶವಾಗುವಂತಹ ಸಂಭವನೀಯತೆ ನುಡಿದು, ಬೆದರಿಕೆ ನೀಡಿ ಪ್ರತಿಯೊಬ್ಬರಲ್ಲೂ ಅಸುರಕ್ಷತೆಯ ಭಾವನೆ ಮೂಡಿಸಿದೆ.

ವಿಜ್ಞಾನವು ಅರ್ಥಪೂರ್ಣ ಜೀವನದ ಗುರಿಯನ್ನು ನೀಡಲು ಅಸಮರ್ಥವಾಗಿದೆ. ಇದು ಮಾನವನಿಗೆ ಜೀವಿಸುವುದರ ಸ್ಪಷ್ಟ ಕಾರಣಗಳನ್ನು ನೀಡಿಲ್ಲ. ವಾಸ್ತವವಾಗಿ ವಿಜ್ಞಾನವು ಪೂರ್ಣವಾಗಿ ಲೌಕಿಕ ಸ್ವಭಾವದ್ದಾಗಿದೆ ಮತ್ತು ಮಾನವನ ಧರ್ಮ್ಮದ (ಪರಮಾರ್ಥದ) ಗುರಿಗಳ ಬಗ್ಗೆ ಅದಕ್ಕೆ ಸಂಬಂಧವಿಲ್ಲದ್ದಾಗಿದೆ. ಭೌತಿಕವಾದವು ವೈಜ್ಞಾನಿಕ ಚಿಂತನೆಗಳಲ್ಲಿ ಅಂತರ್ಗತವಾಗಿದೆ ಮತ್ತು ಭೌತಿಕತೆಯ ತೃಪ್ತಿಗಿಂತ ಉನ್ನತವಾದ ಪರಮಾರ್ಥ ಉದ್ದೇಶಗಳನ್ನು ಅದು ನಿರಾಕರಿಸುತ್ತದೆ. ಇವೆಲ್ಲವನ್ನು ತನ್ನ ಆಯ್ಕೆಯ ಊಹಾಪೋಹದಿಂದ ಮತ್ತು ಸಾಪೇಕ್ಷ ಸತ್ಯಗಳಿಂದ ಮಾಡುತ್ತದೆ. ವಿಜ್ಞಾನವು ಅತಿ ಪ್ರಧಾನವಾದ ಕೆಲವು ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ ಮತ್ತು ಬಹಳಷ್ಟು ಪ್ರಶ್ನೆಗಳಿಗೆ ಉತ್ತರಿಸುವುದೇ ಇಲ್ಲ. ಉದಾಹರಿಸುವುದಾದರೆ ಮಾನವರಲ್ಲಿ ಭೌತಿಕ ಮತ್ತು ಮಾನಸಿಕ ಅಸಮಾನತೆಗಳು ಏಕಿವೆ? ಅಂತಹ ಪ್ರಶ್ನೆಗಳಿಗೆ ಯಾವ ವೈಜ್ಞಾನಿಕ ವಿವರಣೆಗಳು ಸಿಕ್ಕಿಲ್ಲ. ಅಂತಹವೆಲ್ಲಾ ಅದರ ಸಂಕುಚಿತತೆಯ ಮಿತಿಯನ್ನು ಮೀರಿದ್ದಾಗಿದೆ.

## ವಿದ್ವತ್ತಿನ ಅಜ್ಞಾನ

ಬುದ್ಧರ ಇಂದ್ರಿಯಾತೀತ ಮನಸ್ಸಿನ ಅನುಭವವು ಇಂದ್ರಿಯಗಳ ಮಾಹಿತಾಂಶಗಳಿಗೆ ಸೀಮಿತವಾಗಿಲ್ಲ ಮತ್ತು ತಾರ್ಕಿಕತೆಯ ಹಿಡಿತಕ್ಕಿಂತ

ಮೀರಿಹೋಗಿದೆ. ಏಕೆಂದರೆ ತರ್ಕವು ಸಾಪೇಕ್ಷ ಗ್ರಹಿಕೆಗಳ ಮಿತಿಯಲ್ಲಿರುತ್ತದೆ. ಮಾನವನ ಬುದ್ಧಿಮತ್ತೆಯು ತಾನು ಒಟ್ಟುಗೂಡಿಸಿದ ಮತ್ತು ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ವಿರೋಧಾತ್ಮಕವಾಗಿ ವರ್ತಿಸುತ್ತದೆ. ಅದು ಧಾರ್ಮಿಕ ಕ್ಷೇತ್ರವಾಗಿರಬಹುದು ಅಥವಾ ತತ್ವಶಾಸ್ತ್ರವಾಗಿರಬಹುದು. ವಿಜ್ಞಾನ ಅಥವಾ ಕಲೆಯಾಗಿರಬಹುದು. ನಮ್ಮ ಮನಸ್ಸು ನಮ್ಮ ಇಂದ್ರೀಯಗಳಿಂದ ಸಂಗ್ರಹಿಸಿದ ಮಾಹಿತಿಯು ಹಲವಾರು ವಿಧಗಳಲ್ಲಿ ಕೆಳಮಟ್ಟದಲ್ಲಿರುತ್ತದೆ. ಈ ರೀತಿಯ ಸೀಮಿತ ಮಾಹಿತಿಯನ್ನು ಗ್ರಹಿಸಿದ ನಮ್ಮ ಮನಸ್ಸು ಜಗತ್ತನ್ನು ವಿರೂಪವಾಗಿ ಅರ್ಥ ಮಾಡಿಸುತ್ತದೆ. ಫ್ರೆಂಚ್‌ನ ವಿದ್ವಾಂಸ ಕ್ಯೂಸದ ನಿಕೋಲಸ್ (Nicolus of Cusa) ತನ್ನ ಕೃತಿಯಾದ ವಿದ್ವತ್ತಿನ ಅಜ್ಞಾನ (Learned Ignorance) ದಲ್ಲಿ ಈ ರೀತಿ ಅವಲೋಕಿಸುತ್ತಾನೆ:

"ನಮ್ಮ ಎಲ್ಲಾ ಬಡಾಯಿಭರಿತ ಜ್ಞಾನವು ಇಂದ್ರಿಯಗಳಿಗೆ ಆಧಾರವಾಗಿದೆ. ಇದು ನಿಜಕ್ಕೂ ಅಜ್ಞಾನವಾಗಿದೆ ಮತ್ತು ನಿಜ ಜ್ಞಾನವು ಕೇವಲ ಇವೆಲ್ಲವನ್ನು ಉದುರಿಸಿದಾಗ ಮತ್ತು ಇಂದ್ರಿಯಗಳ ಭಾವನೆಯನ್ನು ಬಳಸದಿದ್ದಾಗ ಮಾತ್ರ ಪ್ರಾಪ್ತಿಯಾಗುತ್ತದೆ".

"ಸತ್ಯವು ಬಾಹ್ಯದ ವಿಷಯಗಳಲ್ಲಿ ಅವಲಂಬಿತವಾಗಿಲ್ಲ. ಬದಲಾಗಿ ನಮ್ಮ ಆಂತರ್ಯದಲ್ಲಿದೆ. ನಾವು ಸತ್ಯಶೋಧನೆಗೆ ಪ್ರಯೋಗಗಳಿಂದಾಗಲಿ ಮತ್ತು ಇಂದ್ರೀಯ ಗ್ರಹಿಕೆಗಳಿಂದಾಲಿ, ತರ್ಕದಿಂದಾಗಲಿ ಮತ್ತು ವಿಚಾರದಿಂದಾಗಲಿ ಭರವಸೆ ಇಡಲಾರೆವು. ಇವೆಲ್ಲಾ ಸಲಕರಣೆಗಳು ಜ್ಞಾನವನ್ನು ಗಳಿಸುತ್ತದೆಯೆ ಹೊರತು, ಸತ್ಯವನ್ನಲ್ಲ. ಸತ್ಯವು ಆಂತರ್ಯದ ಅನುಭೂತಿಯ ಸಾಕ್ಷಾತ್ಕಾರದಿಂದಲೇ ಬರುವಂತಹುದು. ಪುಸ್ತಕಗಳು ಕೇವಲ ನಿಮ್ಮ ಚಿಂತನೆಗಳಿಗೆ ಪ್ರೇರಣೆ ನೀಡಬಹುದು ಮತ್ತು ಜ್ಞಾನವನ್ನು ನೀಡಬಹುದು. ಆದರೆ ಸತ್ಯಕ್ಕಾಗಿ ನೀವು ನಿಮ್ಮಲ್ಲಿಯ ಆಂತರ್ಯದಲ್ಲಿ ನಿಮ್ಮ ನೋಟವನ್ನು ತಿರುಗಿಸಬೇಕಾಗುತ್ತದೆ. ಆದುದರಿಂದ ಜ್ಞಾನದ ಅನ್ವೇಷಣೆಯು ಒಂದು ವಿಷಯವಾಗಿದೆ".

"ಪದಗಳು ನಮ್ಮ ಸೀಮಿತ ಮನಸ್ಸಿನ ಉತ್ಪನ್ನವಾಗಿದೆ ಮತ್ತು ನಮ್ಮ



ಮನಸ್ಸು ಜ್ಞಾನಕ್ಕಾಗಿ ನಮ್ಮ ಇಂದ್ರಿಯ ಅನುಭವಗಳಿಗೆ ಅವಲಂಬಿತವಾಗಿದೆ. ಈ ಇಂದ್ರೀಯಗಳು ಕೆಲವು ವೇಳೆ ನಂಬಲು ಅರ್ಹವಲ್ಲ; ಒಂದೇ ಸಂದರ್ಭವನ್ನು ಹಲವು ವ್ಯಕ್ತಿಗಳು ನೋಡಿದಾಗ ಅವರೆಲ್ಲರಿಂದ ಹಲವಾರು ರೀತಿಯಲ್ಲಿ ಹಲವು ನಿರೂಪಣೆ ಅಥವಾ ವಿವರಣೆಗಳು ದೊರೆಯುತ್ತದೆ".

ಕೆಲವರು ತಾವು ತುಂಬಾ ಅರಿತಿದ್ದೇವೆ ಎಂದು ಹೆಮ್ಮೆ ಪಡಬಹುದು. ಆದರೆ ವಾಸ್ತವವಾಗಿ ನಾವು ಕಡಿಮೆ ಅರಿತಷ್ಟು ನಮ್ಮ ವಿವರಣೆಯು ಹೆಚ್ಚು ಖಚಿತವಾಗಿರುತ್ತದೆ. ನಾವು ಹೆಚ್ಚು ಅರಿತಷ್ಟು ನಮ್ಮ ಸೀಮಿತತೆಯನ್ನು ಹೆಚ್ಚು ಅರಿಯಬಹುದು.

ಒಬ್ಬ ಪ್ರತಿಭಾವಂತ ವಿದ್ವಾಂಸರು ಒಮ್ಮೆ ಒಂದು ಪುಸ್ತಕವನ್ನು ಬರೆದನು. ಅದನ್ನು ಆತ ಅಂತಿಮ ಕೃತಿ ಎಂದು ಭಾವಿಸಿದನು. ಆತನ ಪ್ರಕಾರ ಆ ಪುಸ್ತಕವು ಎಲ್ಲಾ ಸಾಹಿತ್ಯದ ರತ್ನಗಳನ್ನು ಮತ್ತು ತತ್ವಗಳನ್ನು ಒಳಗೊಂಡಿದೆ. ತನ್ನ ಸಾಧನೆಯಿಂದ ಹೆಮ್ಮೆಪಟ್ಟು ಆತ ತನ್ನ ಸಹೋದ್ಯೋಗಿಗೆ ತನ್ನ ಶ್ರೇಷ್ಠ ಕೃತಿಯನ್ನು ತೋರಿಸಿದನು. ಹಾಗು ಆತನಿಗೆ ಅವಲೋಕಿಸುವಂತೆ ಕೋರಿಕೊಂಡನು. ಆತನ ಸಹೋದ್ಯೋಗಿಯು ಸಹಾ ಪ್ರತಿಭಾವಂತನಾಗಿದ್ದನು. ಆತ ಆಗ ಲೇಖಕನಿಗೆ ಈ ರೀತಿ ಕೇಳಿಕೊಂಡನು "ಈ ಹಾಳೆಯ ಮೇಲೆ ನಿನಗೇನು ಗೊತ್ತೋ ಅವೆಲ್ಲವನ್ನು ಮತ್ತು ನಿನಗೇನು ಗೊತ್ತಿಲ್ಲವೋ ಅವೆಲ್ಲವನ್ನು ಬರೆ" ಆಗ ಲೇಖಕನು ಆಳವಾದ ಚಿಂತನೆಯಲ್ಲಿ ಕುಳಿತನು. ಆದರೆ ಆತನಿಗೆ ಗೊತ್ತಿರುವುದನ್ನು ಬರೆಯಲು ವಿಫಲನಾದನು. ನಂತರ ಆತನು ಎರಡನೆಯ ಪ್ರಶ್ನೆಯ ಕಡೆಗೆ ತಿರುಚಿದನು. ಆಗಲು ಸಹ ಆತನು ತನಗೆ ಗೊತ್ತಿಲ್ಲದೆ ಇರುವುದನ್ನು ಬರೆಯಲು ವಿಫಲನಾದನು. ಕೊನೆಗೆ ಆತನ ಅಹಂಕಾರವು ಕೆಳಮಟ್ಟಕ್ಕೆ ಇಳಿಯಿತು. ತನಗೆ ಗೊತ್ತಿರುವುದೆಲ್ಲಾ ಅಜ್ಞಾನವೆಂದು ಅರಿವಾಗಿ ಆತ ಸೋಲನ್ನು ಒಪ್ಪಿಕೊಂಡನು.

ಇದರ ಕುರಿತು ಪುರಾತನ ಜಗತ್ತಿನ ಅಥೆನ್ಸ್‌ನ ಸುಪ್ರಸಿದ್ಧ ತತ್ವಜ್ಞಾನಿಯಾದ ಸಾಕ್ರಟೀಸ್‌ನನ್ನು 'ನಿಮಗೇನು ಗೊತ್ತು?' ಎಂದು ಕೇಳಿದಾಗ ಆತ ಹೀಗೆ ಉತ್ತರಿಸಿದನು "ನನಗೆ ಗೊತ್ತಿರುವುದು ಒಂದೇ ವಿಷಯ-ಅದೆಂದರೆ ನನಗೇನೂ ಗೊತ್ತಿಲ್ಲ".

## ವಿಜ್ಞಾನದಿಂದ ಆಚೆಗೆ

ಬೌದ್ಧ ಧರ್ಮವು ಆಧುನಿಕ ವಿಜ್ಞಾನದಿಂದ ಆಚೆಗೆ ಹೋಗಿದೆ. ಹೇಗೆಂದರೆ ವೈಜ್ಞಾನಿಕ ಮನಸ್ಸಿಗಿಂತ ವಿಶಾಲ ಜ್ಞಾನ ಕ್ಷೇತ್ರವನ್ನು ಅಂಗೀಕರಿಸುವುದರಿಂದಾಗಿ, ಜ್ಞಾನವು ಇಂದ್ರಿಯಗಳಿಂದ ಉದಯಿಸುತ್ತದೆ. ಹಾಗೆಯೇ ವ್ಯಕ್ತಿಗತ ಅನುಭವದಿಂದ, ಮಾನಸಿಕ ಸುಸಂಸ್ಕೃತತೆಯಿಂದಲು ಉಂಟಾಗುತ್ತದೆ ಎಂದು ಬೌದ್ಧರು ಒಪ್ಪುತ್ತಾರೆ. ಆದರೆ ಮನಸ್ಸನ್ನು ಸುಶಿಕ್ಷಿತಗೊಳಿಸಲು ಶ್ರೇಷ್ಠತರವಾಗಿ ಏಕಾಗ್ರಚಿತ್ತತೆ ವೃದ್ಧಿಸಲು, ಧಾರ್ಮಿಕ ಅನುಭವವು ಅರ್ಥ ಮಾಡಿಕೊಳ್ಳಬೇಕು ಮತ್ತು ಪ್ರಮಾಣಿಕರಿಸಬೇಕು. ಧಮ್ಮದ ಅನುಭವವು ಟೆಸ್ಟ್ ಟ್ಯೂಬ್ ಅಥವಾ ಮೈಕ್ರೊಸ್ಕೋಪ್‌ಗಳಲ್ಲಿ ನಡೆಸುವಂತಹ ಪ್ರಯೋಗವಲ್ಲ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು.

ವೈಜ್ಞಾನಿಕ ಸತ್ಯ ಯಾವುದಿದೆಯೋ ಅದು ಸಾಪೇಕ್ಷವಾದುದು ಮತ್ತು ಬದಲಾಗುವಂತಹುದು. ಆದರೆ ಬುದ್ಧರಿಂದ ಸಂಶೋಧಿಸಲ್ಪಟ್ಟ ಸತ್ಯವು ಅಂತಿಮವಾದುದು ಮತ್ತು ಪರಿಪೂರ್ಣವಾದುದು. ಧಮ್ಮಸತ್ಯವು ಕಾಲಕ್ಕೆ ತಕ್ಕಂತೆ ಮತ್ತು ಆಂತರಿಕ್ಷಕ್ಕೆ ತಕ್ಕಂತೆ ಬದಲಾಗದು. ಅದು ಅಲ್ಲದೆ ಈ ಆಯ್ಕೆಯ ವೈಜ್ಞಾನಿಕ ಊಹಾಪೋಹಗಳ ಬಗ್ಗೆ, ಸಿದ್ಧಾಂತಗಳ ಬಗ್ಗೆ ಬುದ್ಧರು ಯಾವುದೇ ಸಿದ್ಧಾಂತಗಳಿಗೆ ಅಂಟಬೇಡಿ ಎಂದಿದ್ದಾರೆ. ಅದು ವೈಜ್ಞಾನಿಕವಾಗಿರಬಹುದು ಅಥವಾ ಇನ್ನಿತರವಾಗಿರಬಹುದು. ಈ ರೀತಿಯ ಸಿದ್ಧಾಂತಕ್ಕೆ ಅಂಟುವ ಬದಲು ಮಾನವತೆಯು ಹೇಗೆ ಯೋಗ್ಯವಾದ ಧಾರ್ಮಿಕವಾದ ಜೀವನ ಜೀವಿಸಬೇಕೆಂದು ತಿಳಿಸಿದ್ದಾರೆ. ಹೇಗೆಂದರೆ ಇಂದ್ರಿಯಗಳನ್ನು ಶಾಂತಗೊಳಿಸಿ ಮತ್ತು ಪ್ರಾಪಂಚಿಕ ಆಸೆಗಳಿಂದ ದೂರವಾಗಿ ಯಾವರೀತಿ ನಾವು ನಮ್ಮಲ್ಲಿಯೇ ಜೀವನದ ಸ್ವಭಾವ ಅರಿತಾಗ, ಜೀವನದ ನಿಜ ಉದ್ದೇಶವು ಹುಡುಕಬಲ್ಲೆವು.

ಸಾಧನೆಯು ಬೌದ್ಧ ಧಮ್ಮದಲ್ಲಿ ಪ್ರಧಾನವಾದುದು. ಯಾವ ವ್ಯಕ್ತಿಯು ಸಾಧಿಸದೆ ಕೇವಲ ಅಭ್ಯಾಸ ನಿರತನಾಗುತ್ತಾನೋ ಅಂತಹವ ಅಡುಗೆಯ ಬಗ್ಗೆ ಅಪಾರ ಸಾಹಿತ್ಯವಿಟ್ಟುಕೊಂಡು ಅದನ್ನೇ ಕಂಠಪಾಠ ಮಾಡುತ್ತಾ ಒಂದು ಚಿಕ್ಕ ತಿಂಡಿಯನ್ನು ಮಾಡಲಾರದ ವ್ಯಕ್ತಿಯ ರೀತಿ, ವ್ಯಕ್ತಿಯ



ಹಸಿವು ಪುಸ್ತಕದ ಜ್ಞಾನದಿಂದ ಮಾತ್ರ ಪರಿಹಾರವಾಗಲಾರದು. ಸಾಧನೆಯು (ಪ್ರಯತ್ನಶೀಲತೆ) ಸಂಬೋಧಿಗೆ ಎಂತಹ ಅತ್ಯಗತ್ಯ ಎಂದರೆ ಬೌದ್ಧರ ಕೆಲವು ಅತ್ಯುನ್ನತ ಶಾಲೆಗಳಾದ ಜೆನ್ (Zen) ನಂತಹವುಗಳಲ್ಲಿ ಸಾಧನೆಗೆ (ಧ್ಯಾನಕ್ಕೆ) ಜ್ಞಾನ ಅಧ್ಯಯನಕ್ಕಿಂತಲೂ ಹೆಚ್ಚಾಗಿ ಪ್ರೋತ್ಸಾಹ ನೀಡಲಾಗುತ್ತದೆ.

ವೈಜ್ಞಾನಿಕ ವಿಧಾನವು ಬಾಹ್ಯಕ್ಕೆ ಮಾರ್ಗದರ್ಶಿತವಾಗಿದೆ ಮತ್ತು ಆಧುನಿಕ ವಿಜ್ಞಾನಿಗಳು ಪ್ರಕೃತಿಯನ್ನು ಸ್ವಪ್ರಯೋಜನಕ್ಕೆ ಬಳಸಿಕೊಳ್ಳುತ್ತಿದ್ದಾರೆ ಮತ್ತು ಧಾತುಗಳನ್ನು ತಮ್ಮ ಸುಖಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಈ ರೀತಿಯಾದಾಗ ಪ್ರಾಕೃತಿಕ ಸಮತೋಲನಕ್ಕೂ ಧಕ್ಕೆಯಾಗುತ್ತದೆ ಎಂದು ಪರಿಗಣಿಸದೆ, ಜಗತ್ತಿಗೆ ಮಾಲಿನ್ಯ ಉಂಟುಮಾಡುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಬೌದ್ಧರು ಆಂತರ್ಯದಲ್ಲಿ ಕೇಂದ್ರೀಕೃತವಾಗಿ, ಮಾನವನ ಅಂತರ ಅಭಿವೃದ್ಧಿಗೆ ಪ್ರಾಧಾನ್ಯತೆ ನೀಡಿದ್ದಾರೆ. ಪ್ರಾಥಮಿಕವಾಗಿ ಬೌದ್ಧರ ಬೋಧನೆಯೆಂದರೆ ವ್ಯಕ್ತಿಯೊಬ್ಬ ಯಾವರೀತಿ ಘಟನೆಗಳ ಮತ್ತು ದಿನನಿತ್ಯದ ಪರಿಸ್ಥಿತಿಗಳೊಂದಿಗೆ ಹೇಗೆ ಹೊಂದಿಕೊಳ್ಳಬೇಕು ಮತ್ತು ಸ್ಪರ್ಧಿಸಬೇಕು ಎಂದು ತಿಳಿಸುತ್ತದೆ. ಉನ್ನತ ವಿಧಾನದ ಬೋಧನೆಯೆಂದರೆ ಮಾನವ ವಿಕಾಸವನ್ನು ಪಡೆಯುವುದು ತನ್ನಿಂದ ಆಚೆಗೆ ಬೆಳೆಯುವುದು ಹೇಗೆಂದರೆ ಮಾನಸಿಕ ಸುಸಂಸ್ಕೃತತೆಯಿಂದ ಅಥವಾ ಮಾನಸಿಕ ಅಭಿವೃದ್ಧಿಯಿಂದ.

ಬೌದ್ಧ ಧಮ್ಮದಲ್ಲಿ ಮಾನಸಿಕ ಅಭಿವೃದ್ಧಿಯ ಸಂಪೂರ್ಣ ವಿಧಾನವಿದೆ. ಇದರಿಂದಾಗಿ ಆತ ವಸ್ತುಸ್ಥಿತಿಗಳ ನಿಜಸ್ವರೂಪಗಳ ಅಂತರ್ಜ್ಞಾನ ಪಡೆದು, ಪೂರ್ಣ ಸ್ವ–ಸಾಕ್ಷಾತ್ಕಾರ ಪಡೆದು ಅಂತಿಮ ಪರಮ ಸ್ಥಿತಿಯಾದ ನಿಬ್ಬಾಣದ ಸತ್ಯವನ್ನು ಅನುಭವಿಸುತ್ತಾರೆ.

ಈ ವಿಧಾನವು ಪ್ರಯೋಗಾತ್ಮಕವು ಹಾಗು ವೈಜ್ಞಾನಿಕವಾದುದು. ಇದಕ್ಕಾಗಿ ನಿಷ್ಪಕ್ಷಪಾತ, ನಿರುದ್ರೇಕ ಅವಲೋಕನದ ಅಗತ್ಯವಿದೆ. ಏಕೆಂದರೆ ಇಲ್ಲಿ ಭಾವನೆಗಳ ಮತ್ತು ಮಾನಸಿಕ ಸ್ಥಿತಿಗಳ ವೀಕ್ಷಣೆ ಇರುತ್ತದೆ. ಇಲ್ಲಿ ನ್ಯಾಯಾಧೀಶನಿಗಿಂತ ಹೆಚ್ಚಾಗಿ ವಿಜ್ಞಾನಿಯಂತೆ ಧ್ಯಾನಿಯು ಜಾಗರೂಕತೆಯಿಂದ ಆಂತರ್ಯದ ಜಗತ್ತನ್ನು ವೀಕ್ಷಿಸುತ್ತಾನೆ.

## ಧಮ್ಮರಹಿತ ವಿಜ್ಞಾನ

ಶೀಲದ (ನೈತಿಕತೆಯ) ಆದರ್ಶಗಳಿಲ್ಲದೆ ವಿಜ್ಞಾನವು ಮಾನವತೆಗೆ ಅಪಾಯಕರವಾಗಿದೆ. ವಿಜ್ಞಾನ ಕಂಡುಹಿಡಿದ ಯಂತ್ರವೊಂದೇ ರಾಜನಾಗಿದೆ, ಬುಲೆಟ್ ಮತ್ತು ಬಾಂಬ್‌ಗಳು ವಿಜ್ಞಾನದ ಉಡುಗೊರೆಯಾಗಿದೆ. ಈ ಶಕ್ತಿಗಳಿಂದ ಕೂಡಿದ ಕೆಲವರ ಬಳಿಯೆ ಈಗ ವಿಶ್ವದ ಭವಿಷ್ಯ ಅವಲಂಬಿಸಿದೆ. ಅದೇ ವೇಳೆಯಲ್ಲಿ ಉಳಿದ ಮಾನವತೆಯು ಭಯದಿಂದ ಸಂಕಟಗಳಿಂದ ಕ್ಷಣಗಣನೆ ಮಾಡಬೇಕಾಗಿದೆ. ಯಾವಾಗ ನ್ಯೂಕ್ಲಿಯರ್ ಶಸ್ತ್ರಗಳು, ವಿಷಕಾರಿ ಅನಿಲಗಳು, ಮರಣಾಂತಿಕ ಅಸ್ತ್ರಗಳು ಬೀಳುವುದೋ ಎಂದು ಭೀತಿಪಡುತ್ತಾರೆ. ಇವೆಲ್ಲವನ್ನು ವೈಜ್ಞಾನಿಕ ಸಂಶೋಧನೆಯಲ್ಲಿ ಯಾವರೀತಿ ಕಾರ್ಯದಕ್ಷತೆಯಿಂದ ಜನಸಮೂಹವನ್ನು ಕೊಲ್ಲಬೇಕು ಎದು ಯೋಜನೆ ಸಿದ್ಧಪಡಿಸುತ್ತಿರುತ್ತಾರೆ. ವಿಜ್ಞಾನವು ಕೇವಲ ನೈತಿಕ (ಶೀಲದ)ತೆಯ ಮಾರ್ಗದರ್ಶತೆಯನ್ನು ಮಾನವತೆಗೆ ನೀಡಲು ಪೂರ್ಣವಾಗಿ ಅಸಮರ್ಥವಾಗಿರುವಷ್ಟೇ ಅಲ್ಲ, ಇದು ಮಾನವನ ತೀವ್ರ ಬಯಕೆಯ ಅಗ್ನಿಗೆ ಅಪಾರ ತೈಲವನ್ನು ಸುರಿಸುತ್ತಿದೆ.

ವಿಜ್ಞಾನವು ನೈತಿಕತೆಯಿಂದ ಹೊರತಾಗಿ ಕೇವಲ ನಾಶ ಮಂತ್ರವನ್ನು ಜಪಿಸುತ್ತದೆ. ಇದು ಮಾನವನು ಕಂಡುಹಿಡಿದ ಕ್ರೂರವಾದ ರಾಕ್ಷಸನಂತಾಗಿದೆ ಮತ್ತು ದುರಾದೃಷ್ಟಕರವಾಗಿ ಈ ರಾಕ್ಷಸನು ಮಾನವನಿಗಿಂತ ಬಲಿಷ್ಠನಾಗಿದ್ದಾನೆ. ಮಾನವ ಇಂದು ಧಮ್ಮದ ಶೀಲವನ್ನು ಆಚರಿಸುತ್ತಾ ಈ ರಾಕ್ಷಸನನ್ನು ನಿಯಂತ್ರಿಸುವುದನ್ನು ಕಲಿಯದಿದ್ದರೆ ಈ ರಾಕ್ಷಸ ಬಹುಬೇಗ ಮಾನವನಿಗೆ ವಶಪಡಿಸಿಕೊಳ್ಳುತ್ತಾನೆ. ಧಮ್ಮದ ಮಾರ್ಗದರ್ಶನ ಇಲ್ಲದೆ ವಿಜ್ಞಾನವು ಜಗತ್ತಿಗೆ ನಾಶದ ಬೆದರಿಕೆ ಒಡ್ಡುತ್ತಿದೆ. ಇದಕ್ಕೆ ಪ್ರತಿಯಾಗಿ ವಿಜ್ಞಾನವು ಬೌದ್ಧ ಧಮ್ಮದಂತಹ ಉದಾತ್ತ ಧಮ್ಮದೊಂದಿಗೆ ಜೊತೆಗೂಡಿದರೆ ಇಡೀ ಜಗತ್ತನ್ನು ಶಾಂತಿಯ ಸ್ವರ್ಗವನ್ನಾಗಿ, ಕ್ಷೇಮಕರ ಸ್ಥಳವಾಗಿ ಮತ್ತು ಸುಖದ ತಾಣವಾಗಿಡಬಹುದು.

ಮಾನವತೆಯ ಸೇವೆಗಾಗಿ ಮತ್ತು ಅಂತಹ ಮನೋಭಾವದ ಆಸಕ್ತಿಯು ಇಂದು ಎಂದಿಗಿಂತಲೂ ಅತ್ಯಗತ್ಯವಾಗಿದೆ. ಹಿಂದೆಂದೂ ವಿಜ್ಞಾನ ಮತ್ತು ಧಮ್ಮವು ಪರಸ್ಪರ ಸಹಕಾರದಿಂದ ಸೇರಿರಲಿಲ್ಲ. ಸೇರಿದರೆ ಮನುಕುಲ



ಕಲ್ಯಾಣವಾಗುತ್ತದೆ. ಧಮ್ಮವು ವಿಜ್ಞಾನರಹಿತವಾದರೆ ಅದು ಕುರುಡಾಗುತ್ತದೆ. ಹಾಗೆಯೇ ವಿಜ್ಞಾನವು ಧಮ್ಮರಹಿತವಾದರೆ ಅದು (ಹೆಳವ) ಕುಂಟಾಗುತ್ತದೆ.

## ಬೌದ್ಧ ಧಮ್ಮಕ್ಕೆ ಕಾಣಿಕೆ

ಬೌದ್ಧರ ಜ್ಞಾನವು ಕರುಣೆಯಿಂದ ಸ್ಥಾಪಿಸಲ್ಪಟ್ಟಿದೆ ಮತ್ತು ಅದು ವಿಜ್ಞಾನದ ಅಪಾಯಕರ ಗತಿ (ಈ ವಿಜ್ಞಾನದ ಅಪಾಯಕಾರಿಗತಿಗೆ ಆಧುನಿಕ ವಿಜ್ಞಾನ ಎಂದು ಶೀರ್ಷಿಕೆ ನೀಡಿದ್ದಾರೆ) ತಿದ್ದುವಲ್ಲಿ ಪ್ರಬಲವಾದ ಪಾತ್ರವಹಿಸುತ್ತದೆ.

ಬೌದ್ಧ ಧಮ್ಮವು ವೈಜ್ಞಾನಿಕ ಸಂಶೋಧನೆಗೆ ಮತ್ತು ಅನ್ವೇಷಣೆಗೆ ಪರಮಾರ್ಥದ ನಾಯಕತ್ವವುಳ್ಳ ಮಾರ್ಗದರ್ಶನ ನೀಡಲು ಸಿದ್ಧವಾಗಿದೆ. ಇದರಿಂದಾಗಿ ಭವಿಷ್ಯದ ಉಜ್ವಲ ಸಂಸ್ಕೃತಿ ನಿರ್ಮಾಣವಾಗುತ್ತದೆ. ಬೌದ್ಧ ಧರ್ಮವು ವೈಜ್ಞಾನಿಕ ಉನ್ನತಿಗೆ ಅರ್ಹ ಗುರಿಗಳನ್ನು ನೀಡಬಲ್ಲದು. ಅದಂತು (ವಿಜ್ಞಾನ) ಈಗ ಆಶಾರಹಿತ ಬಿಕ್ಕಟ್ಟಿಗೆ ಬಿದ್ದಿದೆ. ಏಕೆಂದರೆ ತನ್ನ ಅನ್ವೇಷಣೆಗಳಿಂದಾಗಿಯೇ ವಶಿಯಾಗಿ ಈ ಸಂಕಟಸ್ಥಿತಿ ಬಂದಿದೆ.

ಅಲ್ಬರ್ಟ್ ಐನ್‌ಸ್ಟೀನ್‌ರವರು ಈ ರೀತಿ ಹೇಳಿ ಬೌದ್ಧ ಧರ್ಮಕ್ಕೆ ಕಾಣಿಕೆ ನೀಡಿದರು. "ಆಧುನಿಕ ವಿಜ್ಞಾನದ ಅಗತ್ಯಗಳೊಂದಿಗೆ ಯಾವುದಾದರೂ ಧರ್ಮವು ಸರಿಸಮಾನವಾಗಿ ಸ್ಪರ್ಧಿಸುತ್ತಿದ್ದರೆ ಅದು ಬೌದ್ಧ ಧರ್ಮವೇ ಆಗಿರುತ್ತದೆ".

ಬೌದ್ಧ ಧರ್ಮಕ್ಕೆ ಆಧುನಿಕ ವಿಜ್ಞಾನದ ನವೀನ ಸಂಶೋಧನೆಗಳಿಗೆ ತಕ್ಕಂತೆ ಯಾವುದೇ ಪರಿಷ್ಕರಣೆ ತಿದ್ದುಪಡಿ ಬೇಕಾಗಿಲ್ಲ. ಬೌದ್ಧ ಧರ್ಮವು ವಿಜ್ಞಾನದ ಮುಂದೆ ತನ್ನ ದೃಷ್ಟಿಕೋನಗಳಲ್ಲಿ ಯಾವ ರೀತಿಯೂ ತಲೆಬಾಗದು. ಏಕೆಂದರೆ ಅದು ವಿಜ್ಞಾನವನ್ನು ಅಪ್ಪುತ್ತದೆ ಹಾಗೆಯೆ ವಿಜ್ಞಾನಾತೀತಕ್ಕೂ ಅಪ್ಪುತ್ತದೆ. ಬೌದ್ಧ ಧರ್ಮವು ಧಮ್ಮದ ಮತ್ತು ವೈಜ್ಞಾನಿಕ ಚಿಂತನೆಗಳ ನಡುವೆ ಸೇತುವೆಯಾಗಿದೆ. ಇದರಿಂದಾಗಿ ಮಾನವ ಸ್ಫೂರ್ತಿಗೊಂಡು ತನ್ನಲ್ಲಿನ ಸುಪ್ತ ಪ್ರಚನ್ನತೆಗಳನ್ನು ಮತ್ತು ತನ್ನ ಪರಿಸರವನ್ನು ಸಂಶೋಧಿಸುತ್ತಾನೆ.

ಬೌದ್ಧ ಧರ್ಮವು ಕಾಲಾತೀತವಾದುದ್ದಾಗಿದೆ.

# ಧರ್ಮವು ಶಾಂತಿಯನ್ನು ನೀಡೀತೆ ?

## ಅರ್ಥವಿವರಣೆಯಲ್ಲಿ ವ್ಯತ್ಯಾಸಗಳು

ಧಮ್ಮ ಮತ್ತು ಶಾಂತಿ ಈ ಎರಡು ಪದಗಳಿಗೆ ವಿವಿಧ ಜನರು, ತಮ್ಮ ಧಾರ್ಮಿಕ ನಂಬಿಕೆಗಳಂತೆ ಮತ್ತು ವಿವಿಧ ಹಂತದ ಅರಿವಿನಿಂದ ವಿವಿಧ ರೀತಿಯಲ್ಲಿ ಅರ್ಥ ನಿರೂಪಣೆಯನ್ನು ವ್ಯಾಖ್ಯಾನಿಸಿದ್ದಾರೆ.

ವಿದ್ವಾಂಸರು ಮತ್ತು ತತ್ವಜ್ಞಾನಿಗಳು ಧಮ್ಮವನ್ನು ವಿವಿಧರೀತಿಯಲ್ಲಿ ನೋಡಿದ್ದಾರೆ. ಕೆಲವರು ಸಂಕುಚಿತ ರೀತಿಯಲ್ಲಿ ಅತಿ ಪರಿಮಿತವಾಗಿ ವಿವರಿಸಿದರೆ, ಮತ್ತೆ ಕೆಲವರು ವಿಶಾಲವಾದ ದೃಷ್ಟಿಕೋನದಿಂದ ನಿರೂಪಣೆ ನೀಡಿದ್ದಾರೆ.

ಆಕ್ಸ್‌ಫರ್ಡ್ ಶಬ್ದಕೋಶವು ಧರ್ಮವನ್ನು ಈ ರೀತಿ ಹೇಳುತ್ತದೆ "ನಂಬಿಕೆ ಮತ್ತು ಪೂಜೆಯ ವ್ಯವಸ್ಥೆ ಮಾನವನ ವ್ಯಕ್ತಿಗತ ದೇವರಿಗೆ ವಿಧೇಯನಾಗಿರುವಿಕೆ, ಅಂತಹ ಮಾನವನ ಅಂಗೀಕಾರದ ವರ್ತನೆಯೇ ಧರ್ಮ".

ಥಾಮಸ್‌ಪೇನ್ ಎಂಬ ಇಂಗ್ಲಿಷ್ ತತ್ವಶಾಸ್ತ್ರಜ್ಞರು ಈ ರೀತಿ ಹೇಳಿದ್ದಾರೆ : "ಇಡೀ ವಿಶ್ವವೇ ನನ್ನ ದೇಶ. ಮಾನವರೆಲ್ಲರೂ ನನ್ನ ಸಹೋದರರು ಮತ್ತು ಒಳಿತನ್ನು ಮಾಡುವುದೇ ನನ್ನ ಧರ್ಮ". ನಿಜಕ್ಕೂ ಅಂತಹ ಅಭಿಪ್ರಾಯವು ಧರ್ಮಕ್ಕೆ ಮತ್ತು ಜಗತ್ತಿಗೆ ಹಿತಕಾರಿಯಾಗಿದೆ. ಆಗ ಮಾತ್ರ ನಾವು ನೆಲೆಸಿರುವ ಜಗತ್ತಿಗೆ ಶಾಂತಿ ಮತ್ತು ಸೌಹಾರ್ದತೆ ಸಿಗುತ್ತದೆ".

ಹೆಚ್.ಜಿ. ವೆಲ್ಸ್‌ರವರು ಈ ರೀತಿ ಹೇಳುತ್ತಾರೆ : "ಧರ್ಮವು ನಮ್ಮ ವಿದ್ಯಾಭ್ಯಾಸದ ಕೇಂದ್ರೀಯ ಭಾಗವಾಗಿದೆ ಮತ್ತು ಅದು ನಮ್ಮ ಮಾನಸಿಕ ವರ್ತನೆಯನ್ನು ನಿರ್ಧರಿಸುತ್ತದೆ".



ಜರ್ಮನಿಯ ಪ್ರಖ್ಯಾತ ತತ್ವಶಾಸ್ತ್ರಜ್ಞ ಇಮಾನ್ಯುಯೆಲ್ ಕಾಂಟ್ ಈ ರೀತಿ ಹೇಳುತ್ತಾರೆ. "ಧರ್ಮವು ನಮ್ಮ ನೈತಿಕತೆಯ ನಿಯಮಗಳ ಅಂಗೀಕಾರವಾಗಿದೆ ಹಾಗು ಆ ನಿಯಮಗಳನ್ನು ನಾವು ಉಲ್ಲಂಘಿಸಬಾರದು"

ಕಾರ್ಲ್ ಮಾರ್ಕ್ಸ್ ಧರ್ಮವನ್ನು ಈ ರೀತಿಯಾಗಿ ನೋಡಿದ್ದಾರೆ "ಜನರ ಅಫೀಮು, ಧರ್ಮವು ಮಾನವನಿಗೆ ಸುಖದ ಭ್ರಮಾತ್ಮಕ ಭರವಸೆಯನ್ನು ನೀಡಿ, ವಾಸ್ತವದಿಂದ ಪ್ರತ್ಯೇಕಿಸುತ್ತದೆ. ವರ್ತಮಾನದ ಜಗತ್ತಿನ ನಿಜ ಪಾಪಗಳು ಪರಿಹಾರವಾಗಿ ಮರಣದ ನಂತರ ಭ್ರಮಾಲೋಕ, ಸ್ವರ್ಗದ ಭರವಸೆ ನೀಡುವಂತಹುದು. ಅಫೀಮಿನಂತೆ ಮತ್ತೇರಿಸುವಂತಹುದು".

ಎಂಗೆಲ್ಸ್‌ರವರಿಗೆ ಧರ್ಮವೆಂದರೆ "ಮಾನವನ ಪೂರ್ವ ಜೀವನದಲ್ಲಿ ನಿಯಂತ್ರಿಸಿದ್ದ ಬಾಹ್ಯ ಬಲಗಳ ಪರಿಣಾಮವಾಗಿ ಮಾನವನ ಮನಸ್ಸಿನ ಅತಿ ಕಲ್ಪನಾಮಯ ಪ್ರತಿಫಲವೇ ಧರ್ಮ".

## ಗುರಿಯೂ ಒಂದೇ ಆಗಿದೆ

ಯಾವುದೇ ರೀತಿಯ ವ್ಯತ್ಯಾಸವಿರಲಿ ಮತ್ತು ವಿಭಿನ್ನ ನಿರೂಪಣೆಗಳಿರಲಿ ಎಲ್ಲಾ ಧರ್ಮಗಳು ಒಪ್ಪತಕ್ಕ ಏಕೈಕ ವಿಷಯವೇನೆಂದರೆ ಶಾಂತಿಯು ಅತ್ಯಗತ್ಯವಾಗಿದೆ ಮತ್ತು ಧರ್ಮವು ಪೂರ್ಣವಾಗಿ ವ್ಯಕ್ತಿಗತವಾಗಿ, ಕೌಟುಂಬಿಕವಾಗಿ, ಸಾಮಾಜಿಕವಾಗಿ, ದೇಶಿಯವಾಗಿ, ಜಾಗತಿಕವಾಗಿ ಶಾಂತಿಯನ್ನು ನಿರ್ಮಿಸಲು ಪ್ರಮುಖವಾದಂತಹ ಪಾತ್ರವಹಿಸುತ್ತದೆ.

## ಧಾರ್ಮಿಕ ಶಿಕ್ಷಣದ ಅಗತ್ಯತೆ

ಹೇಗೆ ಜಗತ್ತು ಆಳವಾಗಿ ಹೊಸ ಗದ್ದಲಯುತ ಯುಗಕ್ಕೆ ಹೋಗುತ್ತಿದೆಯೋ, ಜೊತೆಗೆ ಅತ್ಯಾಧುನಿಕ ಮತ್ತು ಭಯಾನಕ ಶಸ್ತ್ರಾಸ್ತ್ರಗಳನ್ನು ಮತ್ತು ವಿಪತ್ತುಗಳನ್ನು ಮತ್ತು ನೈತಿಕತೆಯ ಪತನವನ್ನು ಕರೆದೊಯ್ಯುತ್ತಿದೆ. ಹೀಗಾಗಿ ಹಿಂದೆಂದಿಗಿಂತಲೂ ಇಂದು ಧರ್ಮದ ವಿದ್ಯಾಭ್ಯಾಸ ಅತ್ಯಗತ್ಯವಾಗಿದೆ. ಭವಿಷ್ಯದ ಬಗ್ಗೆ ಅನಿಶ್ಚಿತತೆ ತುಂಬಿಬರುವುದರಿಂದ ಅದರ ಪರಿಣಾಮವಾಗಿ ಚಿಂತೆಗಳು, ಒತ್ತಡಗಳು, ಖಿನ್ನತೆಗಳು ಮಾನವನನ್ನು ಆವರಿಸಿದೆ. ಇವೆಲ್ಲವು ಮನಸ್ಸಿನ ಸ್ವಭಾವದ ಯೋಗ್ಯ ಅರಿವು ಸಿಕ್ಕಬಳಿಕ

ಇವುಗಳಿಂದ ಪಾರಾಗಬಹುದು. ಆದರೆ ಅಂತಹ ಪಥ್ಯವನ್ನೇ ಇಂದಿನ ಅಕಾಡೆಮಿಗಳು ಮತ್ತು ಭೌತಿಕತೆಯ ಕೇಂದ್ರೀಕೃತ ವಿದ್ಯಾಭ್ಯಾಸ ಸಂಸ್ಥೆಗಳು ತೆಗೆದು ಹಾಕಿವೆ. ಧಮ್ಮ ಸದಾ ಚಿತ್ತಶಾಂತಿಯ ಬೀಗದ ಕೈಯಾಗಿದೆ. ಹಾಗು ಇದು ತುರ್ತುಪರಿಸ್ಥಿತಿಯ ಕಾಲದಲ್ಲಿ ವಿಭಿನ್ನ, ವಿಪತ್ತುಗಳಲ್ಲಿ, ಯುದ್ಧಗಳ ವೇಳೆ ಮತ್ತು ಇತರೆ ಕ್ಷೋಭೆಯುತ ಪರಿಸ್ಥಿತಿಗಳಲ್ಲಿ ಅತ್ಯಂತ ಸಮಾಧಾನ ನೀಡುತ್ತದೆ.

ಹೇಗೆ ಬಂದರುಗಳಲ್ಲಿ ಹಡಗಿಗಾಗಿ ಲಂಗರು ಹಾಕುವ ಸ್ಥಳವಿದೆಯೋ ಹಾಗೆಯೇ ಮಾನವನಿಗೆ ಲಂಗರುನಂತೆ ಧರ್ಮ ಬೇಕಾಗಿದೆ.

ಮಾನವನ ಮನಸ್ಸು ಚಂಚಲವಾದುದು ಮತ್ತು ಅಸ್ಥಿರವಾದುದು. ಅದನ್ನು ಶಾಂತವಾಗಿಡಲು, ಸ್ಥಿರವಾಗಿಡಲು ಜೀವನವನ್ನು ಆದರ್ಶಯುತವಾಗಿ ಸಾಗಿಸಲು ಒಂದು ಸಹಾಯ ಅಗತ್ಯವಾಗಿ ಬೇಕು. ಕೆಲವು ಧಾರ್ಮಿಕ ಬೋಧನೆಯನ್ನು ಸ್ವೀಕರಿಸಿದ ಮೇಲೆ ಒಬ್ಬನು ತನ್ನ ಮನಸ್ಸನ್ನು ಅದರಿಂದ ಬಂಧಿಸುತ್ತಾನೆ. ಹೀಗೆ ಮಾಡಿದ ನಂತರವೇ ಆತ ನೇರವಾಗಲು ಸಾಧ್ಯವಾಗುತ್ತದೆ. ಇಲ್ಲದಿದ್ದಲ್ಲಿ ಒಂಟಿ ತೋಳದ ಹಾಗೆ ಆಗುತ್ತಾನೆ. ಹೇಗೆ ಹಡಗನ್ನು ಬಂದರಿನಲ್ಲಿ ಲಂಗರು ಹಾಕಿದಾಗ ಅದು ಪ್ರಬಲವಾದ ಗಾಳಿಗೆ ಮತ್ತು ಚಂಡಮಾರುತಗಳಿಗೂ ಜಗ್ಗದೆ ನಿಂತಿರುವುದೊ ಅದೇರೀತಿ ಯಾವಾಗ ಮನಸ್ಸು ಕೆಲವು ಧಾರ್ಮಿಕ ತತ್ವಗಳಿಗೆ ಬದ್ಧವಾದಾಗ ಆ ಮನಸ್ಸು ಪ್ರಬಲವಾದ ಪ್ರಲೋಭನೆಗಳಿಂದ ಮತ್ತು ಜೀವನದ ತೊಂದರೆಗಳಿಗೆ ಪ್ರಬಲವಾಗಿ ಸ್ಥಿರವಾಗಿ ಎದುರು ನಿಲ್ಲುತ್ತದೆ.

ಧಾರ್ಮಿಕ ಶಿಕ್ಷಣವು ಆದ್ದರಿಂದಲೇ ಮನಸ್ಸಿಗೆ ಸ್ಥಿರವನ್ನುಂಟು ಮಾಡುತ್ತದೆ. ಹಾಗೆಯೇ ಸಮಚಿತ್ತತೆಯನ್ನು ಬೆಳೆಸಿದಾಗ ಅದು ಎಲ್ಲಾರೀತಿಯ ಅತಿರೇಕಗಳನ್ನು ತಡೆಯುತ್ತದೆ. ಆಗ ಅದು ಜನನ ಮತ್ತು ಮರಣದ ನಿಜಸ್ವರೂಪದ ಕಡೆಗೆ ಕರೆದೊಯ್ಯುತ್ತದೆ. ಜಗತ್ತಿನ ಬಾಹ್ಯ ಮತ್ತು ಆಂತರ್ಯದ ಬಗ್ಗೆ ಅರಿವು ಮೂಡಿಸುತ್ತದೆ. ಧಮ್ಮದಿಂದ ಆಳವಾದ ಅರಿವು ಮತ್ತು ಅಂತರಜ್ಞಾನ ಪ್ರಾಪ್ತಿಯಾಗಿ ಜೀವನದ ಶ್ರೇಷ್ಠ ಮೌಲ್ಯಗಳ ಬಗ್ಗೆ ತಿಳುವಳಿಕೆ



ಲಭಿಸುತ್ತದೆ. ಶೀಲದ ಬಗ್ಗೆ ಅರ್ಥವಾಗಿ ಧರ್ಮಾಂಧತೆಯು ಮತ್ತು ಪೂರ್ವಾಗ್ರಹ ಪೀಡಿತತೆ ದೂರವಾಗುತ್ತದೆ ಮತ್ತು ನಿಷ್ಪಕ್ಷಪಾತವು ಜಾಗೃತವಾಗಿ ಧಾರ್ಮಿಕ ಸೌಹಾರ್ದತೆಯು ಮೂಡುತ್ತದೆ.

## ಧಾರ್ಮಿಕ ಮನುಷ್ಯ ಯಾರು ?

ಧಾರ್ಮಿಕ ಮನುಷ್ಯನೆಂದು ಗುರುತಿಸಲ್ಪಡುವುದು ಆತನ ಶೀಲದಿಂದ (ನೈತಿಕತೆಯಿಂದ) ಕೂಡಿದ ಯೋಚನೆ, ಮಾತು ಮತ್ತು ಕರ್ಮದಿಂದ. ಯಾವಾಗ ಒಬ್ಬನು ಯೋಗ್ಯವಾದ ಯೋಚನೆಗಳಿಂದ ತುಂಬಿರುತ್ತಾನೋ, ಹಾಗೆಯೆ ಯೋಗ್ಯ ಮಾತು ಮತ್ತು ಯೋಗ್ಯ ಕರ್ಮಗಳಿಂದ ಕೂಡಿದಾಗ ಬೌದ್ಧರ ದೃಷ್ಟಿಯಿಂದ ಪೂರ್ಣ ಧಾರ್ಮಿಕ ಮನುಷ್ಯ ಅಥವಾ ಶೀಲವಂತನಾಗುತ್ತಾನೆ. ಕೆಲವರನ್ನು ಧಾರ್ಮಿಕರೆಂದು ಪರಿಗಣಿಸುವುದು ಕಷ್ಟಕರವಾಗಿದೆ. ಒಂದುವೇಳೆ ಆತ ಕೇವಲ ಪೂಜಾ ಸ್ಥಳಕ್ಕೆ ಹೋಗಿ ತನ್ನ ಮತ್ತು ತನ್ನ ಕುಟುಂಬದ ಬಗ್ಗೆ ಪ್ರಾರ್ಥಿಸುತ್ತಾನೆ. ಅಂತಹವನ ಕೃತ್ಯಗಳು ಸಂಕುಚಿತತೆಯಿಂದ ಕೂಡಿದೆ ಮತ್ತು ಸ್ವಾರ್ಥ ಉದ್ದೇಶಗಳಿಂದ ಕೂಡಿರುತ್ತದೆ.

ಹಾಗೆಯೇ ಕೆಲವು ಬೇರೆ ರೀತಿಯ ಜನರಿದ್ದಾರೆ, ಅವರು ಧಾರ್ಮಿಕ ಸಮಾರಂಭಗಳಿಗೆ ಬರುವುದಿಲ್ಲ. ಅಥವಾ ಪೂಜಾ ಸ್ಥಳಗಳಿಗೂ ಬಂದು ಪ್ರಾರ್ಥಿಸುವುದಿಲ್ಲ, ಆದರೂ ಕೆಲವು ಧಾರ್ಮಿಕ ತತ್ವಗಳನ್ನು ಪಾಲಿಸುತ್ತಾರೆ. ಶಾಂತವಾದ ಜೀವನ ನಡೆಸುತ್ತಾರೆ. ತಮ್ಮ ದೌರ್ಬಲ್ಯಗಳಿಂದ ಹೊರಬಂದಿರುತ್ತಾರೆ ಮತ್ತು ಸಹಾನುಭೂತಿ, ಸಹನೆ, ಪರರಲ್ಲಿ ಅರ್ಥಪೂರ್ಣ ಜೀವನ ನಡೆಸುತ್ತಾರೆ. ಇಂತಹ ವ್ಯಕ್ತಿಗಳು ಮೊದಲಿನ ಗುಂಪಿಗಿಂತ ಉತ್ತಮ ಧಾರ್ಮಿಕರು ಆಗಿರುತ್ತಾರೆ. ಯಾವುದೇ ಧರ್ಮದ ಆದರ್ಶವೇನೆಂದರೆ ಸರಳವಾಗಿರುವುದು ಮತ್ತು ವಿನಮ್ರನಾಗಿರುವುದು. ಈ ರೀತಿಯ ಜೀವನದಿಂದ ಆತನು ಭೌತಿಕತೆಯ ನೀಚ ಪ್ರಲೋಭನೆಯಿಂದ ರಕ್ಷಿತನಾಗುತ್ತಾನೆ ಮತ್ತು ಆತನು ತನ್ನ ಶಕ್ತಿ ಎಲ್ಲವನ್ನು ಪರಮಾರ್ಥದ ಅಭಿವೃದ್ಧಿಗೆ ಬಳಸಿದಾಗ ಅದರಿಂದ ಆತನಿಗೆ ಮತ್ತು ಪರರಿಗೆ ಲಾಭಗಳಾಗುತ್ತದೆ.

## ಧರ್ಮದ ಮೌಲ್ಯ ಸಮರ್ಥನೆ

ಧರ್ಮದ ಹೆಸರಿನಲ್ಲಿ ಕೇವಲ ಬಾಹ್ಯ ಆಚರಣೆಗಳನ್ನು ಅನುಸರಿಸುವುದರಿಂದ ಒಂದು ಧರ್ಮದ ಮೌಲ್ಯವನ್ನು ಅರಿಯಲಾಗುವುದಿಲ್ಲ. ಉದಾಹರಣೆಗೆ ಅವಿದ್ಯಾವಂತನು ಮತ್ತು ಯಾವ ವಿಷಯವೂ ತಿಳಿಯದವನು ಸಹಾ ಕೆಲವು ಅರ್ಥಹೀನ ಸಂಪ್ರದಾಯಗಳನ್ನು ಪಾಲಿಸುತ್ತಾ ಇದೇ ಯೋಗ್ಯ ಮಾರ್ಗ ಎಂದು ಯೋಚಿಸುತ್ತಾನೆ. ಯಾವುದೇ ಧರ್ಮದ ಸ್ವಭಾವ ತಿಳಿಯಬೇಕಾದರೆ ಆ ಧರ್ಮದ ಸ್ಥಾಪಕರ ಮೂಲ ಬೋಧನೆಗಳನ್ನು ಅಭ್ಯಸಿಸಬೇಕಾಗುತ್ತದೆ. ಎಷ್ಟು ಸಾಧ್ಯವಾಗುವುದು ಅಷ್ಟು ಮೂಲ ಗ್ರಂಥಗಳನ್ನು ಅಭ್ಯಸಿಸಬೇಕಾಗುತ್ತದೆ.

ಧಮ್ಮದ ನಿಜವಾದ ಮೌಲ್ಯಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅದನ್ನು ಯೋಗ್ಯವಾಗಿ ಯಥಾಭೂತವಾಗಿ, ವಿಮರ್ಶಾತ್ಮಕವಾಗಿ ಅರಿಯಬೇಕಾಗುತ್ತದೆ ಮತ್ತು ಸಮ್ಮಿಶ್ರ ಬೋಧನೆಗಳನ್ನೆಲ್ಲಾ ಅಭ್ಯಸಿಸಿ ಅದರಲ್ಲಿ ಒಬ್ಬನು ತನ್ನನ್ನು ತಿದ್ದಿಕೊಳ್ಳಬೇಕು. ಯಾವ ರೀತಿಯಲ್ಲಿ ಸರಳ, ವಿನಮ್ರ ಮತ್ತು ಶೀಲವಂತಿಕೆಯ ಜೀವನ ಮಾಡಬೇಕು ಯಾವ ರೀತಿಯಲ್ಲಿ ಶಾಂತಿ ಮತ್ತು ತೃಪ್ತಿಯ ಜೀವನವನ್ನು ಇಲ್ಲೆ ಈಗಲೇ ಮಾಡಬೇಕು ಎಂಬುದೆಲ್ಲಾ ಅಭ್ಯಸಿಸಬೇಕಾಗುತ್ತದೆ.

ನಿಗೂಢತೆಯನ್ನು ಪ್ರದರ್ಶಿಸುವುದರಿಂದ ಅಥವಾ ಅತೀಂದ್ರಿಯ ಪವಾಡಶಕ್ತಿಗಳನ್ನು ಪ್ರದರ್ಶಿಸುವುದರಿಂದ, ಸಾವಿನ ನಂತರ ಸ್ವರ್ಗದ ಆಮಿಷಗಳನ್ನು ನೀಡುವುದರಿಂದ ಮತ್ತು ಮೂಢನಂಬಿಕೆಯ ಆಚರಣೆಗಳಿಂದ ಸಮೂಹಗಳ ಮನಸ್ಸನ್ನು ಆಕರ್ಷಿಸಬಹುದು, ಭಾವನೆಗಳ ಭಾವೋದ್ರೇಕ ಮಾಡಬಹುದು. ಆದರೆ ಇವೆಲ್ಲಾ ಧಮ್ಮದ ಮಾದಕತೆ ಆಗಿದೆ. ಇವು ಕುಶಲವಲ್ಲ. ಇದರಿಂದಾಗಿ ಮೂಢನಂಬಿಕೆಗಳ ವೃದ್ಧಿಯಾಗುತ್ತದೆ ಅಷ್ಟೇ. ಇವೆಲ್ಲಾ ಮಾನಸಿಕ ಕ್ಲೇಶಗಳಿಂದ ವಿಮುಕ್ತಿಗೊಳಿಸುವುದಿಲ್ಲ. ಬದಲಾಗಿ ಪ್ರಾಪಂಚಿಕ ಶಕ್ತಿಗಳು, ಅಧಿಕಾರ, ಕೀರ್ತಿ, ಪ್ರಶಂಸೆ ಮತ್ತು ಇಂದ್ರೀಯ ಬೋಗಗಳಿಗೆ ದಾರಿಯಾಗುತ್ತದೆ ಅಷ್ಟೇ.



ಸ್ವಾಮಿ ವಿವೇಕಾನಂದರು ಒಮ್ಮೆ ತಮ್ಮ ಪ್ರವಚನದಲ್ಲಿ ಹೀಗೆ ನುಡಿಯುತ್ತಾರೆ :

“ಅನುಭವವೊಂದೇ ಜ್ಞಾನದ ಏಕೈಕ ಮೂಲವಾಗಿದೆ. ಯಾವ ವಿಧಾನಗಳಿಂದ ನಾವು ವಿಜ್ಞಾನವನ್ನು ಅರಿತಿದ್ದೇವೆಯೋ ಅಂತಹ ಸಂಶೋದನೆ ವಿಧಾನಗಳನ್ನು ನಾವು ಧರ್ಮಕ್ಕೆ ಅಳವಡಿಸಿದಾಗ, ಒಂದುವೇಳೆ ಧರ್ಮವು ಅಂತಹ ಸಂಶೋಧನೆಗಳಿಂದ ಧ್ವಂಸವಾದರೆ ಅದರ ಅರ್ಥ ಧರ್ಮವು ಏನೂ ಇಲ್ಲ. ಇದು ಕೇವಲ ವ್ಯರ್ಥ ಮತ್ತು ಮೂಢನಂಬಿಕೆಗಳ ಅನರ್ಹ ಕಂತೆ ಎಂದು ತಿಳಿಯಿರಿ; ಅಂತಹುದು ಎಷ್ಟು ಬೇಗ ಮರೆಯಾಗುವುದೋ ಅಷ್ಟೇ ಕ್ಷೇಮ. ಏಕೆ ಧರ್ಮಗಳು ವಿಚಾರಶೀಲತೆಗೆ ಒಳಪಡುವುದಿಲ್ಲ? ಯಾರಿಗೂ ಗೊತ್ತಿಲ್ಲ. ಯಾರದೋ ಅಧಿಕಾರದಿಂದ ಮೂಢವಾಗಿ ನಂಬಿ ಇಂದು ಮಿಲಿಯನ್ ದೇವತೆಗಳನ್ನು ನಂಬುವ ಬದಲು ಮಾನವತೆಯು ವಿಚಾರಪರತೆಯುಳ್ಳ ನಾಸ್ತಿಕರಾಗುವುದು ಮೇಲು...”

ಅತಿರೇಕಗಳಿಂದ ಕೂಡಿದ ಮೂಢನಂಬಿಕೆಗಳನ್ನು ಮತ್ತು ತಾರ್ಕಿಕ ಸಂದೇಹವಾದಿಗಳನ್ನು ಮೀರಿ, ಧಾರ್ಮಿಕ ಅಪೇಕ್ಷೆಯು ವಿಚಾರಶೀಲತೆಯ ಮತ್ತು ಪ್ರಜ್ಞಾಯುತ ಸತ್ಯದ ಹಾದಿ ಹಿಡಿಯಬೇಕು.

## ಧಮ್ಮವನ್ನು ಪರಿಚಯಿಸಲು ವೈಚಾರಿಕ ವಿಧಾನ :

ರಹಸ್ಯವಾದಗಳ ಮತ್ತು ನಿಗೂಢವಾದಗಳ ಕಾಲವು ಕ್ಷಿಪ್ರವಾಗಿ ಮರೆಯಾಗಿ ಈಗ ವೈಜ್ಞಾನಿಕ ಜ್ಞಾನ ಮತ್ತು ಸಂಶೋಧನೆಗಳಿಗೆ ಹಾದಿ ಮಾಡಿಕೊಟ್ಟಿದೆ. ಆದರೂ ಜಗತ್ತಿನಾದ್ಯಂತ ಕೆಲವರು ಭಯಗಳನ್ನು ಹೋಗಲಾಡಿಸಲು, ಕೆಲವರ ನಂಬಿಕೆಗಳನ್ನು ಸ್ಥಿರಗೊಳಿಸಲು ಪುರಾತನ ವಿಧಾನಗಳನ್ನು ಅನುಸರಿಸಲಾಗುತ್ತಿತ್ತು. ಆದರೆ ಅದೇ ವಿಧಾನಗಳು ಅಧುನಿಕ ಜಗತ್ತಿಗೆ ಅನ್ವಯವಾಗುವುದಿಲ್ಲ.

ವೈಚಾರಿಕತೆಯ ದೂರದೃಷ್ಟಿಯನ್ನು ಗಮನಿಸುತ್ತಾ ಭಾರತದ ಪ್ರಧಾನಮಂತ್ರಿ ಶ್ರೀ ಜವಹರಲಾಲ್ ನೆಹರೂರವರು ಒಮ್ಮೆ ಹೀಗೆ ಹೇಳಿದ್ದರು.

"ಒಬ್ಬನು ಧಮ್ಮವನ್ನು ಪರಿಚಯಿಸಲು 3 ಮುಖ್ಯ ವಿಷಯಗಳನ್ನು ತಡೆಯಬೇಕು. ಅದೆಂದರೆ 1. ಪವಿತ್ರ ಗ್ರಂಥಗಳು 2. ದೇವರ ಕಲ್ಪನೆ 3. ಪರಲೋಕ. ಒಂದುವೇಳೆ ಈ 3ರಲ್ಲಿ ಒಂದನ್ನು ಜನರು ಅವಲಂಬಿಸಿದರೆ ಅವರು ತಮ್ಮ ವಿಚಾರತೆಯನ್ನು ಬಿಟ್ಟು ಸ್ವೀಕರಿಸುತ್ತಾರೆ. ಜನರಿಗೆ ಬುದ್ಧಿವಾದದ ಸಲಹೆ ಏನೆಂದರೆ ಮುಕ್ತ ಮನಸ್ಸಿನಿಂದ ಸತ್ಯ ಹುಡುಕಿ ಅವರ ಜ್ಞಾನ ಮತ್ತು ಅನುಭವವನ್ನು ವೃದ್ಧಿಸಬೇಕು. ಇದು ನಿಜಕ್ಕೂ ಧರ್ಮಪ್ರಸಾರದ ಆದರ್ಶ ವಿಧಾನವಾಗಿದೆ. ಇದರಿಂದಾಗಿ ಹಲವಾರು ಬಗೆಯ ಧಾರ್ಮಿಕ ಪೂರ್ವಾಗ್ರಹ ಪೀಡತೆಯು, ಮೂಢನಂಬಿಕೆಗಳು ಮತ್ತು ಅಪಾರ್ಥತೆಗಳು ದೂರವಾಗುತ್ತದೆ.

ನೆಹರೂ ಅವರು ಹೇಳುವುದು ಏನೆಂದರೆ ಪವಿತ್ರ ಗ್ರಂಥಗಳಲ್ಲಿರುವ ಪ್ರತಿಯೊಂದನ್ನು ಧರ್ಮದ ಹೆಸರಿನಲ್ಲಿ ಸ್ವೀಕರಿಸಬಾರದು. ಅವರು ಹೇಳುವಂತೆ ಅವರ ಧರ್ಮ ಏನೆಂದರೆ "ಒಳ್ಳೆಯದು ಒಳ್ಳೆಯದನ್ನೇ ನೀಡುತ್ತದೆ ಮತ್ತು ಕೆಟ್ಟದ್ದು ಕೆಟ್ಟದ್ದನ್ನೇ ನೀಡುತ್ತದೆ". ಈ ರೀತಿಯಾಗಿ ಬೌದ್ಧರಲ್ಲಿರುವ ವಿಚಾರತೆಯನ್ನು ಪ್ರಶಂಸಿಸುತ್ತಾ ಅವರು 'ದಿ ಡಿಸ್ಕವರಿ ಆಫ್ ಇಂಡಿಯಾ'ದಲ್ಲಿ ಹೀಗೆ ಬರೆದಿದ್ದಾರೆ : "ಬುದ್ಧರಿಗೆ ಜನಪ್ರಿಯವಾದ ಧರ್ಮದಲ್ಲಿ ಅಸಂತೃಪ್ತಿ, ಮೂಢನಂಬಿಕೆ, ಸಮಾರಂಭ ಮತ್ತು ಪುರೋಹಿತ ತಂತ್ರಗಳನ್ನು, ಅವುಗಳೆಲ್ಲದಲ್ಲಿರುವ ದೋಷವನ್ನು ತೋರಿಸುವಂತಹ ಧೈರ್ಯವಿತ್ತು. ಅವರು ಆತ್ಮವಿದ್ಯೆಯಲ್ಲಿ ಅಥವಾ ಬ್ರಹ್ಮ ವಿದ್ಯೆಯಲ್ಲಿ, ಪವಾಡಗಳಲ್ಲಿ, ದೇವವಾಣಿಯಲ್ಲಿ ಮತ್ತು ದೇವರಲ್ಲಿ ಆಸಕ್ತಿ ತೋರಿಸಲಿಲ್ಲ (ಏಕೆಂದರೆ ಅವುಗಳ ನಿಸ್ಸಾರತೆಯನ್ನು ಅವರು ಅರಿತಿದ್ದರು) ಅವರ ಕರೆ ವೈಚಾರಿಕತೆಯ ಕಡೆಗಿತ್ತು. ತರ್ಕ, ವಿಮರ್ಶೆ ಮತ್ತು ಸಾಕ್ಷಾತ್ಕಾರ. ಅವರು ಶೀಲಕ್ಕೆ ಮಹತ್ವ ನೀಡಿದ್ದರು ಮತ್ತು ಅವರ ವಿಧಾನವು ಮನಶಾಸ್ತ್ರಿಯ ವಿಶ್ಲೇಷಣೆಯಿಂದ ಕೂಡಿತ್ತು. ಆತ್ಮರಹಿತ ಮನಶಾಸ್ತ್ರವು (ಅವರ ಅದ್ವಿತೀಯ ಸಂಶೋಧನೆ ಆಗಿತ್ತು). ಅವರ ಆಗಮನವು ಯಾವರೀತಿ ಇತ್ತು ಎಂದರೆ ಆಧ್ಯಾತ್ಮಗಳ ಊಹಾಪೋಹಗಳ ಹಳಸಾದ ಗಾಳಿಯ ನಂತರ ಬರುವ ಪರ್ವತಗಳ ಅಂಚಿನಿಂದ ಬರುವ ನಿರ್ಮಲ ಉಲ್ಲಾಸಕಾರಿ ತಂಗಾಳಿಯಂತಿತ್ತು".



ಬುದ್ಧರು ಎಲ್ಲಾ ಸಿದ್ಧಾಂತಗಳಿಗಿಂತ ಶ್ರೇಷ್ಠವಾದುದನ್ನು ನೀಡಿದ್ದಾರೆ. ಅವರ ಸಂದೇಶವು ನಿತ್ಯವಾದುದು. ಶತಮಾನಗಳಿಂದ ಇಂದಿಗೂ ಸಹಾ ರೋಮಾಂಚನಗೊಳಿಸುತ್ತದೆ. ಹಿಂದಿನಂತೆ ಈಗಿನ ಕಾಲಕ್ಕೂ ಅವರ ಶಾಂತಿಯ ಸಂದೇಶವು, ಚದುರಿದ ದುಃಖಿತ ಮಾನವತೆಗೆ ಎಂದೆಂದಿಗಿಂತಲೂ ಅವಶ್ಯಕತೆಯಿದೆ ಎಂದು ನೆಹರೂರವರು ಬುದ್ಧರ ಬಗ್ಗೆ ಹೇಳಿದ್ದಾರೆ.

ಅಲ್ಬರ್ಟ್ ಐನ್‌ಸ್ಟಿನ್‌ರವರು ಭವಿಷ್ಯದ ಧರ್ಮದ ಬಗ್ಗೆ ಮಾತನಾಡುತ್ತಾ ಈ ರೀತಿ ಹೇಳುತ್ತಾರೆ "ಅದು ವ್ಯಕ್ತಿಗತ ದೇವರನ್ನು ದಾಟಿಹೋಗಿರಬೇಕು ಮತ್ತು ಬ್ರಹ್ಮ ವಿದ್ಯೆ ಹಾಗು ಸಿದ್ಧಾಂತಗಳು ಮೊದಲೇ ತಡೆಯಾಗಿರಬೇಕು. ಅದು ಪ್ರಕೃತಿಯನ್ನು ಮತ್ತು ಪರಮಾರ್ಥವನ್ನು ಒಳಗೊಂಡಿರಬೇಕು. ಅದು ಧರ್ಮದ ಪ್ರಜ್ಞೆಯ ಮೇಲೆ ಆಧಾರವಾಗಿರಬೇಕು. ಆ ಧರ್ಮ ಪ್ರಜ್ಞೆಯು ಎಲ್ಲಾ ವಿಷಯಗಳ, ಪ್ರಾಕೃತಿಕ ಮತ್ತು ಪರಮಾರ್ಥಗಳ ಅನುಭವದಿಂದ ಉದಯಿಸಿರಬೇಕು. ಹಾಗು ಅರ್ಥಪೂರ್ಣವಾದ ಐಕ್ಯತೆಯು ಹೊಂದಿರಬೇಕು. ಬೌದ್ಧ ಧಮ್ಮವು ಮಾತ್ರ ಈ ವಿವರಣೆಗೆ ಉತ್ತರಿಸುತ್ತದೆ".

ಬುದ್ಧರ ವಿಚಾರಶೀಲತೆಯು ಧಾರ್ಮಿಕ ಇತಿಹಾಸದ ದಾಖಲೆಯಲ್ಲೇ ಅದ್ವಿತೀಯವಾಗಿದೆ. ಅವರು ಬುದ್ಧಿವಾದ ಹೇಳುತ್ತಾರೆ "ಧಮ್ಮವನ್ನು ಕೇವಲ ಗೌರವದಿಂದ ಸ್ವೀಕರಿಸಬೇಡಿ, ಬದಲಾಗಿ ಪರಿಶೋಧನಾ ನಂತರ ಸ್ವೀಕರಿಸಿ".

ಬುದ್ಧರು ತಮ್ಮನ್ನು ಹಿಂಬಾಲಿಸಿದ ಹಲವರನ್ನು ಹೀಗೆ ಬುದ್ಧಿವಾದ ಮಾಡಿದರು. ತಕ್ಷಣವೇ ಬೋಧನೆಯನ್ನು ಸ್ವೀಕರಿಸದಿರಿ, ಚೆನ್ನಾಗಿ ಚಿಂತಿಸಿ, ಇದು ಸಾಧ್ಯವೇ, ಇದು ಪ್ರಾಯೋಗಿಕವೇ, ಹೀಗೆ ಚೆನ್ನಾಗಿ ಮನದಟ್ಟಾದ ನಂತರ ನೀವು ಸ್ವೀಕರಿಸಿ ಎನ್ನುತ್ತಿದ್ದರು.

ಅವರು ತಮ್ಮ ಬಳಿ ಹಿಂಬಾಲಕರಾದ ಶಿಷ್ಯರಿಗೆ ಅವರು ತಮ್ಮ ಪೂರ್ವ ಗುರುಗಳಿಗೆ ಸಹಾಯ ಮಾಡುವುದನ್ನು ಸಹಾ ತಪ್ಪಿಸಲಿಲ್ಲ. ಬದಲಾಗಿ ಪ್ರೋತ್ಸಾಹಿಸಿದರು. ಇದರಿಂದ ಸ್ಪಷ್ಟವಾಗಿ ತಿಳಿಯುವುದು ಏನೆಂದರೆ ಅವರು ತಮ್ಮ ಶಿಷ್ಯರಿಗೆ ಅಪಾರ ಸ್ವಾತಂತ್ರ್ಯ ನೀಡಿದ್ದರು. ಹಾಗು ಪರ ಧರ್ಮಿಯರ

ಮೇಲೆ ಅಸೂಯೆ ಮಾಡುವುದನ್ನು ಅವರು ಪ್ರೋತ್ಸಾಹಿಸಲಿಲ್ಲ. ಹಾಗು ಪರ ಧರ್ಮಿಯರ ಮೇಲೆ ಸೌಹಾರ್ದತೆಯಿಂದ ಇದ್ದರು.

ಟಿ.ಹೆಚ್. ಹಕ್ಸಲೆ ಬೌದ್ಧ ಧಮ್ಮದ ಬಗ್ಗೆ ಹೀಗೆ ಹೇಳಿದ್ದಾರೆ : "ಬುದ್ಧಧಮ್ಮವು ತನ್ನ ಅಪ್ಪಟ ಶುದ್ಧತೆಯಿಂದಾಗಿ ಶರಣಗತನದ ಪ್ರತಿಜ್ಞೆಗಳಾಗಲಿ ಮತ್ತು ಜಾತೀಯ ಸಹಾಯವಾಗಲಿ ಈ ಅಂಶಗಳಿಂದ ಎಂದೂ ಕೂಡಿರದೆ, ಪುರಾತನ ಅರ್ಧ ವಿಶ್ವವನ್ನೇ ಕ್ಷಿಪ್ರವಾಗಿ, ಗಣನೀಯವಾಗಿ, ಶಾಂತವಾಗಿ, ಯಾವುದೇ ಮೂಢನಂಬಿಕೆಗಳಿಲ್ಲದೆ ವಿಶಾಲ ಮಾನವತೆಯ ಜನಾಂಗವನ್ನು ಪ್ರಭಾವಗೊಳಿಸಿತ್ತು."

ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್ ಎಂಬ ಪುರಾತನ ಶಾಸ್ತ್ರಜ್ಞರ ಗಮನಿಸುವಿಕೆಯ ಪ್ರಕಾರ

"ಬೌದ್ಧರು ತಮ್ಮ ಧರ್ಮವನ್ನು ವಿನಮ್ರರಾಗಿ, ಬೋಧನೆಗಳನ್ನು ತಿಳಿಸುತ್ತಾ ಸುಮಧುರ ಧ್ವನಿಗಳಲ್ಲೇ ತಮ್ಮ ಧರ್ಮವನ್ನು ಹರಡಿದರು. ಆದರೆ ಇನ್ನಿತರ ಕೆಲವು ಧರ್ಮಗಳು ಖಡ್ಗದ ಅಂಚಿನಿಂದ ದಯೆಯಿಲ್ಲದೆ ಕ್ರೂರವಾಗಿ ಹರಡಿದರು. ಪರರು ಭೀಕರವಾಗಿ ನಗರಗಳನ್ನು ಸುಡುತ್ತಾ ಬೆಂಕಿಯನ್ನು ಬೆಳಗುತ್ತಾ ಉತ್ಸಾಹ ತೂರಿ ಧರ್ಮ ಹರಡಿದರು. ಆದರೆ ಬೌದ್ಧರು ಶಾಂತ ಮುಖದಿಂದ ಕೂಡಿ, ಉಲ್ಲಾಸದಿಂದ, ಶಾಂತಯುತವಾಗಿ ಜಗವನ್ನು ಜ್ಞಾನದಿಂದ, ಮೈತ್ರಿಯಿಂದ ಬೆಳಗಿದರು. ಅದು ರೋಗಿಗಳ ಆರೋಗ್ಯವನ್ನು ಸುಧಾರಿಸಿ ಅವರನ್ನು ಪ್ರಫುಲ್ಲಿತಗೊಳಿಸಿ, ದಾರಿಹೋಕರು ದಾರಿಬದಿಯ ವಿಶ್ರಾಂತಿಗ್ರಹಗಳಲ್ಲಿ ನೆಮ್ಮದಿಯ ನಿದ್ದೆಯ ನಂತರದ ಕಾಣುವ ಸುಖದ ನಗುವಿನಂತೆ ಕೂಡಿತ್ತು".

ರೆವ್ ಜೆ.ಟಿ. ಸುಂದರ ಲ್ಯಾಂಡ್ ಹೀಗೆ ಹೇಳುತ್ತಾರೆ : ಬೌದ್ಧರು ಶಾಂತಿಯುನ್ನು ಪ್ರಬಲವಾಗಿ ಬೋಧಿಸಿದರು ಅದು ಹೆಚ್ಚು ಪರಿಣಾಮಕಾರಿಯಾಗಿ, ಅವರು ತಮ್ಮ ಇಡೀ ಇತಿಹಾಸದಲ್ಲಿ ಇದನ್ನು ಪಾಲಿಸಿದರು. ಇದನ್ನು ಇಷ್ಟು ಚೆನ್ನಾಗಿ ಜಗತ್ತಿನ ಬೇರೆ ಯಾವ ಧರ್ಮಗಳು ಈ ಜಗತ್ತನ್ನು ಮಾಡಿರಲಿಲ್ಲ. ಆ ಜನರು ಹೆಚ್ಚು ಪರಮಾರ್ಥವುಳ್ಳವರಾಗಿದ್ದರು.



ಈಗಿನ ಪ್ರಾಪಂಚಿಕದವರಂತೆ ಇರಲಿಲ್ಲ. ಅವರು ಚಾರಿತ್ರ್ಯವನ್ನು, ಸೇವೆಯನ್ನು, ಪ್ರೀತಿಯನ್ನು ಮತ್ತು ಶಾಂತಿಯನ್ನು ಹಬ್ಬಿಸಿದರು. ಹೊರತು ಕೀರ್ತಿ, ಐಶ್ವರ್ಯ, ಅಧಿಕಾರ ಮತ್ತು ಯುದ್ಧಗಳ ಕಡೆ ವಾಲಲಿಲ್ಲ ಮತ್ತು ಬೌದ್ಧ ಧಮ್ಮವು ಪೂರ್ಣ ವಿಕಸತೆಯಿಂದ ಪ್ರಕಾಶಮಾನವಾಗಿ ಅಭಿವೃದ್ಧಿ ಹೊಂದಿತು. ಏಕೆಂದರೆ ಬೌದ್ಧಧಮ್ಮ ಒಂದೇ ಇಡೀ ಜಗತ್ತಿನಲ್ಲಿ ರಕ್ತಪಾತ ಅಥವಾ ಹಿಂಸೆಯಿಲ್ಲದೆ ಇರುವ ಧರ್ಮವಾಗಿದೆ".

## ಅಶೋಕನ ಅನುಕರಣೀಯ ಆದರ್ಶ

ಅಶೋಕ ಅತ್ಯಂತ ಉತ್ಸಾಹಿತನಾಗಿ, ಭಕ್ತಿಯಿಂದ, ಜನರಿಗೆ ಅತ್ಯಂತ ಹಿತಕಾರಿಯಾಗುವಂತ ಅನೇಕ ಕಾರ್ಯಗಳು ಪುಣ್ಯಗಳನ್ನು ಮಾಡಿದುದು ಗಮನಾರ್ಹ ವಾಸ್ತವಂಶವಾಗಿದೆ. ಆತನು ಕುಡಿಯುವ ನೀರಿಗಾಗಿ ಅಪಾರ ಭಾವಿಗಳನ್ನು ತೋಡಿಸಿದನು, ನೆರಳಿಗಾಗಿ ಅಪಾರ ವೃಕ್ಷಗಳನ್ನು ಬೆಳೆಸಿದನು, ದಾರಿಗಳನ್ನು ನಿರ್ಮಿಸಿದನು. ಔಷಧಿಯ ಗಿಡಗಳು ಮಾನವರಿಗೆ ಹಾಗೆಯೇ ಪ್ರಾಣಿಗಳಿಗೆ ಆಸ್ಪತ್ರೆಗಳನ್ನು ನಿರ್ಮಿಸಿದನು. ಪ್ರಜೆಗಳನ್ನು ಮಕ್ಕಳಂತೆ ಭಾವಿಸಿದನು ಮತ್ತು ಸಲಹಿದನು. ಪ್ರಜೆಗಳು ಸುನಾಗರಿಕರಾಗಲು ಬಂಡೆಗಳಲ್ಲಿ ಮತ್ತು ಸ್ತಂಭಗಳ ಮೂಲಕ ಸಂದೇಶ ರಚಿಸಿ ಇಡೀ ಸಾಮ್ರಾಜ್ಯದಲ್ಲಿ ಹರಡಿದನು. ಶೀಲದ ಸಂಸ್ಕೃತಿಯು ವೃದ್ಧಿಯಾಗಲು ಕೆಲವು ಅಧಿಕಾರಿಗಳನ್ನು ನೇಮಿಸಿದನು. ಮೂರನೆಯ ಬೌದ್ಧ ಮಹಾ ಸಮ್ಮೇಳನವು ಇವರ ಅಧೀನದಲ್ಲಿ ನಡೆಯಿತು. ಹಾಗೆಯೇ ಧರ್ಮದೂತರನ್ನು ವಿಶ್ವದ ಎಲ್ಲೆಡೆ ಹತ್ತಿರ ಮತ್ತು ದೂರ ಎಲ್ಲಾಕಡೆ ಕಳುಹಿಸಿ ವಿಶ್ವಭ್ರಾತೃತ್ವ ಮತ್ತು ಶಾಂತಿಯ ಮೂಲಕ ಅದ್ವಿತೀಯ ಜ್ಞಾನವನ್ನು ಹರಡಿಸಿದನು.

ಅಶೋಕನ ಚಟುವಟಿಕೆಗಳು ಸತ್ಯ. ಅವು ಸಂಶಯತೀತವಾಗಿದ್ದವು. ಆತ ನಿಜಕ್ಕೂ ಭಕ್ತಿಯ ಪ್ರತಿಪಾದಕನಾಗಿದ್ದನು. ಆತನ ಜೀವನವು ಪುಣ್ಯಕಾರ್ಯಗಳಿಂದ ಪರಿಶ್ರಮಯುತವಾಗಿತ್ತು. 'ಪರಹಿತ ಕಾರ್ಯದಲ್ಲಿ ಪರಿಶ್ರಮ, ಪ್ರಾಮಾಣಿಕವಾದ ವ್ಯವಹಾರ' ಇವು ಆತನ ತತ್ವದ ಕೆಲವು ಉದಾಹರಣೆಗಳಾಗಿತ್ತು. ಸ್ಫೂರ್ತಿಯಿಂದ ಮತ್ತು ಗಮನಾರ್ಹ ಸಾಧನೆಯಿಂದ

ಅಶೋಕನು ತನ್ನ ಜೀವನವನ್ನು ಬೌದ್ಧತತ್ವಕ್ಕೆ ಅನುಸಾರವಾಗಿ ರಾಜಧರ್ಮವನ್ನು ಪಾಲಿಸಿದನು 'ಬಹುಜನ ಹಿತಾಯ, ಬಹುಜನ ಸುಖಾಯ' ಎಂಬ ಧ್ಯೇಯೋದ್ದೇಶದಿಂದ ಕಾರ್ಯ ಮಾಡಿದನು. ಇದನ್ನು ಬುದ್ಧರು ಮೊದಲು ಅರಹಂತರಾದ 60 ಭಿಕ್ಷುಗಳಿಗೆ ತಿಳಿಸಿದ್ದರು. ಆಗ ಅದು ಪ್ರಾರಂಭದ ಧರ್ಮ ಪ್ರಸರಣಾ ಮತ್ತು ಜಗದ ಹಿತದ ಕಾರ್ಯವಾಗಿತ್ತು.

ಅಶೋಕನ ಶ್ರೇಷ್ಠತ್ವದಿಂದ ಸ್ಫೂರ್ತಿ ಪಡೆದ ಹೆಚ್.ಜಿ. ವೇಲ್ಸ್‌ರವರು ತಮ್ಮ "ಔಟ್‌ಲೈನ್ ಆಫ್ ಹಿಸ್ಟರಿ"ಯಲ್ಲಿ ಈ ರೀತಿ ಹೇಳಿದ್ದಾರೆ. "ಹತ್ತುಸಾವಿರ ಚಕ್ರವರ್ತಿಗಳಲ್ಲಿ, ಯಾರು ಇದುವರೆಗೆ ಇತಿಹಾಸದಲ್ಲಿ ತಮ್ಮ ಗಾಂಭಿರ್ಯವನ್ನು, ಅನುಕಂಪವನ್ನು, ಶಾಂತತೆಯನ್ನು ಮತ್ತು ಉಚ್ಚ ರಾಜತ್ವವನ್ನು ಪ್ರದರ್ಶಿಸಿದರೋ ಅವರಲ್ಲೆಲ್ಲಾ ಅಶೋಕನ ಹೆಸರು ಮಾತ್ರ ಅತ್ಯಂತ ಪ್ರಕಾಶಿಸುತ್ತದೆ ಮತ್ತು ಅದ್ವಿತೀಯವಾಗಿ ಹೊಳಪುಳ್ಳ ನಕ್ಷತ್ರವಾಗಿ ಪ್ರಕಾಶಿಸುತ್ತದೆ".

ಅಶೋಕನ ಅಂತಹ ಆಡಳಿತದಿಂದ ಸ್ಫೂರ್ತಿಹೊಂದಿ, ಕತ್ತಲಲ್ಲಿ ಇಂದು ಇರುವ ಜಗತ್ತಿಗೆ ಒಳಿತುಂಟು ಮಾಡಲು ಪ್ರಯತ್ನಶೀಲರಾಗಬೇಕಾಗಿದೆ.

## ಧಮ್ಮ ಮತ್ತು ಭೌತಿಕವಾದ

ಇಂದು ಜಗತ್ತಿಗೆ ಆವರಿಸಿದ ಕಾರ್ಮೋಡಗಳಲ್ಲಿ ಗಲಭೆಗಳು ಮತ್ತು ಜಾಗತಿಕ ಸಮಸ್ಯೆಗಳು ಪ್ರಮುಖವಾಗಿದೆ ಇವಕ್ಕೆ ಕಾರಣವೇನೆಂದರೆ ಧರ್ಮದ ಅವನತೆ ಮತ್ತು ಭೌತಿಕವಾದದ ಬೆಳವಣಿಗೆ ಆಗಿದೆ.

ವಿಶ್ವದ ಇತಿಹಾಸವನ್ನು ನಾವು ಗಮನಿಸಿದಾಗ ಎಲ್ಲೆಲ್ಲಾ ನಾಗರಿಕತೆಗಳು ಅಥವಾ ರಾಷ್ಟ್ರಗಳು ಅವನತಿ ಹೊಂದಿದವು ಅಲ್ಲೆಲ್ಲಾ ಧರ್ಮದ ಅವನತಿ ಮಾಡಲು ಆಗಿರುವುದು ಕಂಡುಬರುತ್ತದೆ. ಇತಿಹಾಸಕಾರ ಎಡ್ವರ್ಡ್ ಗಿಬ್ಬನ್‌ರವರು ತಮ್ಮ ರೋಮನ್ ಸಾಮ್ರಾಜ್ಯದ ಉದಯ ಮತ್ತು ಅವನತಿಯ ಇತಿಹಾಸ'ದಲ್ಲಿ ಹೇಳಿರುವುದು ಏನೆಂದರೆ ಧರ್ಮವು ಬಿರುಕಾಗಿ ಅಪಾರ ಹೋಳುಗಳಾಗಿಯೇ ರೋಮನ್ ಸಾಮ್ರಾಜ್ಯವು ಪತನವಾಯಿತು. ಆಗ ಅದು ರೋಮನ್ ಸಾಮ್ರಾಜ್ಯಕ್ಕೆ ಹೇಳಿದ್ದರೂ, ಅದು ಈಗಿನ ಅಧುನಿಕ ನಾಗರಿಕತೆಗೂ ಅನ್ವಯಿಸುತ್ತದೆ.



ಈ ರೀತಿಯ ಅಪಾಯಗಳನ್ನು ಅರಿತು ಪ್ರಾಜ್ಞರಾದ ಮಾನವ ಇಂದು ಮಾಡಬೇಕಾಗಿರುವುದು ಏನೆಂದರೆ ಪರಸ್ಪರ ಸಹಕಾರದಿಂದ ಕಾರ್ಯಗೈದು ಕಾರಣಗಳನ್ನು ಕಂಡುಹಿಡಿದು, ಅವುಗಳನ್ನು ತಡೆಯುವುದು ಹಾಗು ಧಮ್ಮವನ್ನು ಅವನತಿಯಿಂದ ತಪ್ಪಿಸುವುದು.

ಧಾರ್ಮಿಕ ಸೌಹಾರ್ದತೆಯು ಹದಗೆಟ್ಟಿರುವಾಗ, ಅನಾರೋಗ್ಯಕರ ಮತಾಂತರದ ಸ್ಪರ್ಧೆ ಎದ್ದಾಗ, ಮತಾಂಧತೆಯು ಹೆಚ್ಚಾಗುತ್ತದೆ ಮತ್ತು ಧರ್ಮಯುದ್ಧ (ಯುದ್ಧ?)ಗಳು ನಡೆಯುತ್ತವೆ. ಆಗ ಶಾಂತಿಯನ್ನು ಹದಗೆಡಿಸಿ ಹಾನಿಯುಂಟುಮಾಡುತ್ತವೆ. (ಯಾವ ಧರ್ಮದಿಂದ ಶಾಂತಿ ಸ್ಥಾಪನೆ ಆಗಬೇಕಿತ್ತೋ) ಅಂತಹ ಧರ್ಮದ ಮೂಲಕ ಯುದ್ಧಗಳಾಗುತ್ತವೆ. ಸಿದ್ಧಾಂತಗಳು ಮತ್ತು ಮೂಢನಂಬಿಕೆಗಳು ಸದಾ ಉನ್ನತಿ ಹೊಂದುತ್ತಿರುವ ಜ್ಞಾನ ಮತ್ತು ವೈಜ್ಞಾನಿಕ ಸಂಶೋಧನೆಗಳ ಬೆಳಕಿನಲ್ಲಿ ಧರ್ಮದ ಮೌಲ್ಯವನ್ನು ನಾಶಮಾಡುತ್ತವೆ. ಈ ಸ್ಥಿರವಾದ ಫಲಿತಾಂಶದಿಂದ ಭೌತಿಕವಾದವು ಉದಯಿಸುತ್ತದೆ. ಹಾಗೆಯೇ ಸಮಾಜದಲ್ಲಿ ಹೆಚ್ಚು ನೈತಿಕ ಶಿಥಿಲತೆಯನ್ನು ತರುತ್ತದೆ.

## ಭೌತಿಕತೆಯ ಅಭಿವೃದ್ಧಿ

ಪ್ರಾಪಂಚಿಕ ಸುಖಗಳ, ಅಧಿಕಾರದ ಮತ್ತು ಒಡೆತನದ ಹುಚ್ಚಿನ ಹಿಂದೆ ಬೆನ್ನಟ್ಟಿದಾಗ ಎಲ್ಲಾರೀತಿಯ ನೈತಿಕ ಅವನತಿ ಉಂಟಾಗುತ್ತದೆ. ಪಕ್ಷಪಾತ ಮತ್ತು ಪೂರ್ವಾಗ್ರಹ ಪೀಡಿತತೆ ಹೆಚ್ಚಾಗಿ ಮಾನವತೆಯ ಸಮೂಹವನ್ನು ನಾಶ ಮಾಡುವ ನಿರ್ಧಾರ ಕೈಗೊಳ್ಳುವಂತೆ ಆಗುತ್ತಿದೆ.

ಯಾವುದನ್ನು ನಾವು ಇಂದು ಆಧುನಿಕ ಮನರಂಜನಾ ಸಾಧನೆಗಳೆನ್ನುವೆವೊ, ಅವುಗಳು ನೋಡುವವರ ಮೃಗೀಯ ಪ್ರವೃತ್ತಿಗಳನ್ನು ಜಾಗೃತಿಗೊಳಿಸುತ್ತವೆ ಮತ್ತು ಇಂದ್ರೀಯ ಸುಖಗಳ ಭಾವಾವೇಶವನ್ನು ವೃದ್ಧಿಮಾಡುತ್ತವೆ. ಈ ರೀತಿಯ ಮಾದಕತೆಯಿಂದಾಗಿ ವೀಕ್ಷಕರು ಇಂದ್ರೀಯಗಳ ನಿಯಂತ್ರಣ ತಪ್ಪುತ್ತಾರೆ. ತಮ್ಮ ಯೋಗ್ಯ ನಿರ್ಧಾರಗಳಿಗೆ ವಿರುದ್ಧವಾದುದ್ದನ್ನೇ ಮಾಡುತ್ತಾರೆ. ತಮ್ಮ ಇಂದ್ರೀಯ ತೃಪ್ತಿಗಾಗಿ ಮುಗ್ಧಜನರ

ಸುಖ ಮತ್ತು ಶಾಂತಿಯನ್ನು ಹಾಳು ಮಾಡುತ್ತಾರೆ. ಅವರು ಸಾಮಾನ್ಯರೀತಿಯ ಯೋಚನೆಯನ್ನೇ ಮಾಡುವುದಿಲ್ಲ ಮತ್ತು ಪರರ ಯೋಗ್ಯ ಮಾತುಗಳನ್ನು ಕೇಳಲು ನಿರಾಕರಿಸುತ್ತಾರೆ. ಅವರಿಗೆ ತಾವು ತಮ್ಮನ್ನು ಮತ್ತು ಪರರನ್ನು ಹಾಳು ಮಾಡುತ್ತಿದ್ದೇವೆ ಎಂದು ಅರಿವಿದ್ದು ತಪ್ಪು ಮಾಡುತ್ತಾರೆ.

ಮಾನವನ ವಿಕೃತ ತೀವ್ರಬಯಕೆಯಿಂದಾಗಿ ರೋಗಪೂರಿತ ಮತ್ತು ಗುರಿಯಿಲ್ಲದ ಸಮಾಜ ನಿರ್ಮಾಣವಾಗಿ ಅನೈತಿಕತೆ, ದುಶ್ಶೀಲ ಮತ್ತು ಪಾಪಯುತ ಕ್ರಿಯೆಗಳಿಂದ ಮಾನವನ ಘನತೆ ಮತ್ತು ಸಂವೇದನೆಗಳಿಗೆ ಅವಮಾನವಾಗಿ ನೈತಿಕತೆಯ ಅಧೋಗತಿ ಆಗುತ್ತದೆ.

ಪ್ರಾಪಂಚಿಕ ಅಧಿಕಾರದ ದಾಹವು ದೇಶಗಳಲ್ಲಿ ಹೆಚ್ಚು ಶಸ್ತ್ರಾಸ್ತ್ರಗಳ ಸ್ಪರ್ಧೆಯು ಏರ್ಪಡುತ್ತದೆ. ಅತ್ಯಂತ ಅಪಾಯಕಾರಿ ಶಸ್ತ್ರಗಳು ರಚಿತವಾಗಿ, ಅವುಗಳಿಂದ ಜಗತ್ತನ್ನು ಕೆಲವು ಸೆಕೆಂಡುಗಳಲ್ಲಿ ನಾಶ ಮಾಡಬಹುದಾದ ಅಸ್ತ್ರಗಳಿಗೆ ಇಡೀ ರಾಷ್ಟ್ರದ ಹಣವನ್ನು ಸುರಿದು ನಾಗರಿಕರನ್ನು ಹಸಿವು ಮತ್ತು ಬಡತನದಲ್ಲೇ ಇಡುತ್ತಾರೆ. ಇಂದಿನ ಶಸ್ತ್ರಾಸ್ತ್ರಗಳು ತಡೆಯಲಾಗದ ಆಧುನಿಕ ಪ್ರವೃತ್ತಿ, ವಿಕೃತತೆಯ ಜೀವನಶೈಲಿ ಮತ್ತು ಲಕ್ಷಾಂತರ ಜನರ ಜೀವಗಳೆಂದು ಪರಿಗಣಿಸಲ್ಪಟ್ಟಿದೆ.

ಮಾನವ ಹಿತಕಾರಿ ರಚನಾತ್ಮಕ ಸಂಶೋಧನೆಗಳನ್ನು ಮತ್ತು ಯೋಚನೆಗಳನ್ನು ಎರಡನೇ ದರ್ಜೆಯ ಅಥವಾ ಪೂರ್ಣ ಕೆಲಸಕ್ಕೆ ಬಾರದ ತುಣುಕುಗಳು ಎಂದು ಪರಿಗಣಿಸಲ್ಪಡುತ್ತದೆ. ಅಲ್ಪಾವಧಿಯ ಭೌತಿಕ ಲಾಭವೇ ಮೇಲುಗೈ ಪಡೆಯುತ್ತದೆ.

ಜ್ಞಾನೋದಯ ಪಡೆದ ಪ್ರಾಜ್ಞರ ಮಾತುಗಳು ಕಿವುಡರ ಕಿವಿಗೆ ಬಿದ್ದಂತೆ ವ್ಯರ್ಥವಾಗುತ್ತದೆ. ಯಾವ ಬೋಧನೆಯಿಂದಾಗಿ ಮಾನವ ಶೀಲವಂತನಾಗಿ, ಶಾಂತಿಯುತ ಜೀವನವನ್ನು ಸಾರ್ವತ್ರಿಕವಾಗಿ ಜೀವಿಸಬಹುದಿತ್ತು ಅವೆಲ್ಲಾ ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ.



## ರೋಮ್ ಉರಿಯುತ್ತಿರುವಾಗ ನೀರೂವಿನ ಪಿಟೀಲು ಬಾರಿಸುತ್ತಿರುವಿಕೆ

ಯಾವ ದೇಶಗಳ ಆರ್ಥಿಕ ಅಭಿವೃದ್ಧಿಯು ಪೂರ್ಣವಾಗಿದೆಯೋ, ಭೌತಿಕತೆಯ ಉನ್ನತಿಯು ಹೆಚ್ಚಾಗಿದೆಯೋ ಅಲ್ಲಿ ಬಹಳಷ್ಟು ಸಮಸ್ಯೆಗಳನ್ನು ನಾವು ಕಾಣುತ್ತೇವೆ. ಯಾವುವೆಂದರೆ ಪರಿಸರ ಮಾಲಿನ್ಯ, ಶಕ್ತಿಯ ಕೊರತೆ, ನಿರುದ್ಯೋಗ, ಹಣದುಬ್ಬರ, ನೈತಿಕತೆಯ ಅಧಃಪತನ ಮತ್ತು ಸಾಮಾಜಿಕ ಸಮಸ್ಯೆಗಳಾದ ಮಾದಕ ವಸ್ತುಗಳ ಚಟಗಳು, ಮಾನಸಿಕ ಅಸ್ವಸ್ಥರು, ವಿಚ್ಛೇದನಾ, ವಿವಿಧ ರೋಗಗಳು ಮತ್ತು ಆತ್ಮಹತ್ಯೆ.

ಈ ರೀತಿಯ ಎಲ್ಲಾ ದುರಂತಗಳು ಮತ್ತು ಹುಚ್ಚುತನಗಳು ನಡೆಯುತ್ತಿದ್ದರೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು, ಆರ್ಥಿಕ ಅಭಿವೃದ್ಧಿಯ ಅಸಂಖ್ಯಾತ ಅನುಕರಣೆ ಮಾಡುತ್ತಾ ಭೌತಿಕವಾದದ ಸಂಸ್ಕೃತಿಯನ್ನು ಮತ್ತಷ್ಟು ಹೆಚ್ಚಿಸುತ್ತಾರೆ. ಅವರು ತಮ್ಮ ಮನೆಗಳನ್ನು ಭೌತಿಕ ಸ್ವರ್ಗಗಳನ್ನಾಗಿ ಪರಿವರ್ತಿಸಲು ಹೊರಟಿದ್ದಾರೆ. ಹೇಗೆಂದರೆ ರೋಮ್‌ನಗರ ಉರಿಯುತ್ತಿದ್ದಾಗ ನೀರೂ ಪಿಟೀಲನ್ನು ನುಡಿಸುತ್ತಿದ್ದನಂತೆ, ಅಂತಹ ವ್ಯಕ್ತಿಗಳು ಪರರಿಂದ ಮಾಡಲ್ಪಟ್ಟ ತಪ್ಪುಗಳಿಂದ ಪಾಠ ಕಲಿಯಲು ಸೋಲುತ್ತಾರೆ.

## ವಿಸ್ಮಯಕಾರಿ ಗೊಂದಲಗಳು

ಹೆಚ್ಚು ಹೆಚ್ಚು ಜನರು ಇಲಿಗಳ ಓಟ ಸ್ಪರ್ಧೆಯಂತೆ ಇಂದ್ರೀಯ ಸುಖಗಳ ಹಿಂದೆ, ಶಕ್ತಿಯ, ಕೀರ್ತಿಯ, ಉನ್ನತಿಯ ಹಿಂದೆ ಬಿದ್ದಿದ್ದಾರೆ. ಆಗ ಅವರು ಕ್ಷೋಭೆಯನ್ನು ಮತ್ತು ಗೊಂದಲವನ್ನು ಅನುಭವಿಸುತ್ತಾರೆ. ಅವರ ಕಾಣಿಕೆ ಹೆಚ್ಚಾದಷ್ಟು ಸಮಸ್ಯೆ ಹೆಚ್ಚಾಗಿ ಅಂತಹ ಜಗತ್ತಿನಲ್ಲಿ ನಾವಿದ್ದೇವೆ.

ಒಂದೆಡೆ ಜನರು ಯುದ್ಧಗಳಿಗೆ ಹೆದರುತ್ತಾರೆ, ಹಾಗೆಯೇ ಇನ್ನೊಂದೆಡೆ ಯುದ್ಧಗಳಿಗೆ ಸಿದ್ಧತೆ ನಡೆಸುತ್ತಾರೆ. ಅವರು ಶಾಂತಿಯ ಬಗ್ಗೆ ಬಹಳಷ್ಟು ಮಾತನಾಡುತ್ತಾರೆ. ಹಾಗೆಯೇ ದುಃಖವನ್ನು ಹಂಚುತ್ತಿದ್ದಾರೆ. ಇಂದು ಜಗತ್ತು ಹೆಚ್ಚು ಹೆಚ್ಚು ಜನಸಂದಣಿಯಿಂದ ಕಿಕ್ಕಿರಿಯುತ್ತಿದ್ದರೂ ಮಾನವ ಮಾತ್ರ ಒಂಟಿತನವನ್ನೋ, ಒಂಟಿತನದ ವೇದನೆಯನ್ನೋ ಅನುಭವಿಸುತ್ತಿದ್ದಾನೆ.

ಜನರಿಗೆ ಇಂದು ಹೆಚ್ಚು ಹೆಚ್ಚು ಸಮಯ ದೊರೆಯುತ್ತಿದ್ದರೂ ಅವರು ಮಾನಸಿಕವಾಗಿ ಅವಿಶ್ರಾಂತರೇ ಆಗಿದ್ದಾರೆ. ಮಾನವರಿಗೆ ಇಂದು ಚಂದ್ರನ ಮೇಲೆ ಹೇಗೆ ಹೋಗಿ ಇಳಿಯಬೇಕು ಎಂಬಂತಹ ಎಲ್ಲಾ ರೀತಿಯ ಜ್ಞಾನವು ಇದ್ದರೂ ಭೂಮಿಯ ಮೇಲೆ ಹೇಗೆ ಕ್ಷೇಮವಾಗಿ ಬದುಕಬೇಕು ಎಂಬುದೇ ತಿಳಿದಿಲ್ಲ. ಅಂತಹ ಗೊಂದಲಗಳು ಮತ್ತು ವಿರೋಧತೆಗಳಿಂದ ಮಾನವ ಇಂದಿನ ಅಂತರಿಕ್ಷ ಯುಗದಲ್ಲಿ ಇದ್ದಾನೆ. ಆದರೂ ಈ ಎಲ್ಲಾ ಸಮಸ್ಯೆಗಳು ಮಾನವತೆಗೆ ಹೊಸದೇನಲ್ಲ.

ಎಲ್ಲಿಯವರೆಗೆ ಮಾನವನಲ್ಲಿ ಮೋಹವಿರುತ್ತದೋ ಅಲ್ಲಿಯವರೆಗೆ ಗೊಂದಲಗಳು ಇದ್ದೇ ಇರುತ್ತವೆ. ಬೇರೆ ರೀತಿಯ ಮಾನಸಿಕ ಕ್ಲೇಶಗಳೊಂದಿಗೆ ಮಾನವ ಇಂದು ಮೋಹವುಳ್ಳವನಾಗಿ ವಿಷಯಗಳು ನಿಜಸ್ವರೂಪ ಅಥವಾ ಜೀವನದ ಪರಮಾರ್ಥ ಸತ್ಯಗಳನ್ನು ಅವು ಹೇಗಿವೆಯೋ ಹಾಗೆಯೇ ಅರಿಯುವಂತಹ ಸಾಮರ್ಥ್ಯಕ್ಕೆ ಅಂಧನಾಗಿದ್ದಾನೆ.

## ಅಸಮತೋಲನದ ಜೀವಿಸುವಿಕೆ

ಭೌತಿಕ ಮತ್ತು ಪರಮಾರ್ಥ ಬೆಳವಣಿಗೆಯ ಅಸಮತೋಲನದಿಂದ ಸ್ಥೂಲವಾದ ಗೊಂದಲ ಮತ್ತು ದ್ವಂದ್ವಗಳಿಂದ ಆಧುನಿಕ ಜಗತ್ತು ಇಂದು ಕೂಡಿದೆ.

ಭೌತಿಕ ಐಶ್ವರ್ಯ ಒಂದೇ ಮಾನವನಿಗೆ ಇಂದು ಶಾಂತಿ ಮತ್ತು ಸುಖಗಳನ್ನು ನೀಡುವುದಿಲ್ಲ. ಕ್ಷೋಭೆ ಮತ್ತು ಹತಾಶೆಗಳನ್ನು ನಾವು ಅಸಮತೋಲನ ಮನಸ್ಸಿನಿಂದ ನಿರೀಕ್ಷಿಸಬಹುದು. ಅವರಿಗೆ ಇದರಿಂದ ಪರಿಶುದ್ಧ ಹಾದಿ ತಿಳಿಯದೆ ಅವರು ಎಲ್ಲಾರೀತಿಯ ಮಾದಕ ಔಷಧಿಗಳು ಮತ್ತು ಮಾದಕ ಮತ್ತುಗಳು ಸೇವಿಸಿ ಕ್ಷಣಿಕ ಉಪಶಮನ ಪಡೆದು ನಂತರ ಅದರಿಂದ ಹೊರಬರಲಾರದೆ ಅವರು ಮಾನಸಿಕ ಅಸ್ವಸ್ತರು ಅಥವಾ ಆತ್ಮಹತ್ಯೆಗೆ ಶರಣು ಹೋಗುತ್ತಾರೆ.



ಮಾದಕ ವಸ್ತುಗಳ ಮಿತಿಮೀರಿದ ಸೇವನೆ, ಮದ್ಯಪಾನ, ಜೂಜು ಇವೆಲ್ಲಾ ಅಸಮತೋಲಿತ ಜೀವನದ ಲಕ್ಷಣಗಳಾಗಿವೆ.

ಆಧುನಿಕ ಜೀವನದ ಸುಖಗಳಲ್ಲೇ ತಲ್ಲೀನನಾಗುತ್ತಿದ್ದರೆ ಮತ್ತು ಯಾವುದೇ ರೀತಿಯ ಪರಮಾರ್ಥ ಉನ್ನತಿಯು ಇಲ್ಲವಾದರೆ ಆಗ ಮಾನವ ಅಲಕ್ಷಿಯು ಮತ್ತು ಸೋಮಾರಿಯಾಗುತ್ತಾನೆ. ಇದನ್ನು ದಾಟಲು ಪರಿಶ್ರಮ ಬೇಕಾಗುತ್ತದೆ. ಪರಿಶ್ರಮ ಮತ್ತು ನಿರಂತರ ಯತ್ನಶೀಲತೆಯು ಸಿಗುವುದು ಶ್ರದ್ಧೆಯ ಕ್ಷೇತ್ರವಿದ್ದಾಗ. ಆ ಶ್ರದ್ಧೆಯು ಆಳವಾಗಿ ಧರ್ಮದಲ್ಲಿ ಬೇರೂರಿದೆ.

## ಧರ್ಮದ ಮೂಲಕ ಶಾಂತಿ

ಭೌತಿಕವಾದದ ಶೀಘ್ರ ಬೆಳವಣಿಗೆ ಮತ್ತು ಅಸಮತೋಲಿತ ಜೀವನವು ಧರ್ಮದ ಮೂಲಕ ಸಿಗುವ ಶಾಂತಿಯ ಪ್ರಚನ್ನತೆಗೆ ಕತ್ತಲೆ ಉಂಟುಮಾಡುತ್ತದೆ. ಜಗತ್ತಿನ ಧರ್ಮಗಳು ಇಂದು ಸಮೂಹದ ವ್ಯವಸ್ಥಿತ ಸಂಸ್ಥೆಗಳನ್ನು ಹೊಂದಿವೆ. ಆದರೆ ಆ ಸಂಸ್ಥಾಪಕರ ನಿಜ ಬೋಧನೆಗಳು ಅತಿ ಅಲ್ಪ ಪರಿಣಾಮಗಳನ್ನು ಹಿಂಬಾಲಕರ ಮೇಲೆ ಬೀರುತ್ತಿವೆ. ಹೀಗಾಗಿ ಸರಳತೆ, ಸಂಯಮ, ಸತ್ಯ ಮತ್ತು ಸ್ವಾರ್ಥರಹಿತತೆಯನ್ನು ನಾವು ತೆಳುವಾಗಿ ಕಾಣುತ್ತಿದ್ದೇವೆ.

ಧರ್ಮದ ನಿಜ ಮೌಲ್ಯ ತಿಳಿಯಬೇಕಾದರೆ ಧಮ್ಮ ಸಂಸ್ಥಾಪಕ ಅಪ್ಪಟ ಸಂದೇಶಗಳು ಯೋಗ್ಯ ತಿಳುವಳಿಕೆ ಹೊಂದಿರಬೇಕು. ಕೇವಲ ಸರಳ ಶೀಲಪಾಲನೆಯು ಶಾಂತಿಯ ಅತ್ಯುನ್ನತ ಪ್ರಚನ್ನತೆಯನ್ನು ಒಳಗೊಂಡಿದೆ.

ಯೋಚನೆಗಳ ನಿಯಂತ್ರಣದ ಸಾಧನೆಯಿಂದ ಶಾಂತಿಯು ಸಿಗುತ್ತದೆ ಮತ್ತು ಮಾತಿನಲ್ಲಿ ಮತ್ತು ದೇಹದಲ್ಲಿ ನಿಯಂತ್ರಣವಿದ್ದಾಗ ಪರರಿಗೆ ಶಾಂತಿ ದೊರೆಯುತ್ತದೆ. ಈ ರೀತಿಯಾಗಿ ಈ ಮೂರು ದ್ವಾರಗಳಿಂದ ನಾವು ಪಾಪಯುತ ಅಥವಾ ಅಕುಶಲವನ್ನು ಆಚರಿಸುವೆವು. ಇಲ್ಲಿಂದಲೇ ಘರ್ಷಣೆಗಳು ಪ್ರಾರಂಭವಾಗುತ್ತದೆ. ಒಂದುವೇಳೆ ಆಂತರಿಕ ಜಗತ್ತನ್ನು ಚೆನ್ನಾಗಿ, ಜಾಗರೂಕತೆಯಿಂದ ರಕ್ಷಿಸಿದರೆ ಯುದ್ಧಗಳು ಮತ್ತು ಜಗಳಗಳು ಸ್ವಾಭಾವಿಕವಾಗಿ ಪರೀಕ್ಷಿಸಿದಂತಾಗುತ್ತದೆ.

ಧರ್ಮದಿಂದ "ನಿಮ್ಮನ್ನು ಅರಿಯಿರಿ" ಇದೇ ಶಾಂತಿಗೆ ತತ್ವವಾಗಿದ್ದು, "ಸ್ವರ್ಗದ ಸಾಮ್ರಾಜ್ಯ ಆಂತರ್ಯದಲ್ಲಿದೆ" ಎಂದು ತಿಳಿಯಿರಿ. ಜನರು ಅಪ್ಪಟ ಧಾರ್ಮಿಕ ತತ್ವಗಳನ್ನು ಪಾಲಿಸಿದರೆ, ನೈತಿಕವಾಗಿ ನಿಯಂತ್ರಣದಿಂದಿದ್ದರೆ, ಸಮಾಜಕ್ಕೆ ಮಾಡಬೇಕಾದ ಕರ್ತವ್ಯಗಳನ್ನು ಪರಸ್ಪರ ಮಾಡಿದರೆ, ಶಾಂತಿ ಮತ್ತು ಸೌಹಾರ್ದತೆ ಸ್ವಾಭಾವಿಕವಾಗಿ ಹಿಂಬಾಲಿಸುವುವು.

ಬುದ್ಧರು ಸಿಗಾಲೋವಾದ ಸುತ್ತದಲ್ಲಿ ಸರಳವಾದ ಉಪದೇಶವನ್ನು ನೀಡಿದ್ದಾರೆ. ಅದರಲ್ಲಿ ಯಾವರೀತಿ ವ್ಯಕ್ತಿ ತನ್ನ ತಂದೆ-ತಾಯಿಯರೊಂದಿಗೆ, ಮಕ್ಕಳೊಂದಿಗೆ, ಗುರುಗಳೊಂದಿಗೆ, ಶಿಷ್ಯರೊಂದಿಗೆ, ಗಂಡನೊಂದಿಗೆ, ಹೆಂಡತಿಯೊಂದಿಗೆ, ಮಿತ್ರರೊಂದಿಗೆ, ಯಜಮಾನರೊಂದಿಗೆ ಮತ್ತು ಕಾರ್ಮಿಕರೊಂದಿಗೆ ವ್ಯವಹರಿಸಬೇಕೆಂದು ವಿವರವಾಗಿ ಪರಿಣಾಮಕಾರಿಯಾಗಿ ವಿವರಿಸಿದ್ದಾರೆ.

ಅಂದರೆ ಪೋಷಕರು ಮತ್ತು ಮಕ್ಕಳ ಇವರ ನಡುವಿನ ಕರ್ತವ್ಯ.
ಗುರುಗಳು ಮತ್ತು ಶಿಷ್ಯರ ನಡುವಿನ ಕರ್ತವ್ಯ
ಗಂಡ ಮತ್ತು ಹೆಂಡತಿ ಇವರ ನಡುವಿನ ಕರ್ತವ್ಯ
ಮಿತ್ರ ಮತ್ತು ಮಿತ್ರರ ನಡುವಿನ ಕರ್ತವ್ಯ
ಯಜಮಾನ ಮತ್ತು ಸೇವಕರ ನಡುವಿನ ಕರ್ತವ್ಯ
ಧಾರ್ಮಿಕ ಗುರು ಮತ್ತು ಶಿಷ್ಯರ ನಡುವಿನ ಕರ್ತವ್ಯ

ಈ ರೀತಿಯಾಗಿ ಇಡೀ ಸಮಾಜವನ್ನು ಕರ್ತವ್ಯದ ಮೂಲಕ ಸುಧಾರಿಸಬಹುದು. ಈ ಸುತ್ತವನ್ನು ವ್ಯಾಖ್ಯಾನಿಸುತ್ತಾ ಮಿಸೆಸ್ ರೈಸ್ ಡೆವಿಡ್ಸ್‌ರವರು ಹೀಗೆ ಹೇಳುತ್ತಾರೆ : "ಬುದ್ಧರ ಮೈತ್ರಿಯ ಸಿದ್ಧಾಂತವು ಮಾನವ ಮತ್ತು ಮಾನವರ ನಡುವೆ ಪ್ರೀತಿಯನ್ನು ನಿರ್ಮಿಸಿದೆ. ಮನೆಯ ಮತ್ತು ಸಾಮಾಜಿಕ ನೈತಿಕತೆಯು ಇಷ್ಟು ಚೆನ್ನಾಗಿ ಬೇರೆಲ್ಲೂ ಕಂಡುಬಂದಿಲ್ಲ ಮತ್ತು ನಿಜವಾಗಿ ನಾವು ಹೇಳಬೇಕೆಂದರೆ ಈ ವಿನಯ ಅಥವಾ ನಿಯಮಗಳ ಶಿಸ್ತು ಎಷ್ಟೊಂದು ಚೆನ್ನಾಗಿ ಮಾನವನ ಹಿತಾಸಕ್ತಿಯನ್ನು ಒಳಗೊಂಡಿದೆ. ಎಷ್ಟೊಂದು ಪ್ರಜ್ಞಾಯುತವಾಗಿ ಮತ್ತು ಎಷ್ಟು ವಿಶಾಲವಾಗಿ ಜ್ಞಾನವು ಇದನ್ನು



ಧ್ಯಾನಿಸುವುದರಿಂದ ಸಿಗುತ್ತದೆ. ಆ ಸಂಭಾಷಣೆಯು ಸಹಾ ಎಷ್ಟು ಹೊಸತನವನ್ನು ಮತ್ತು ಸಾಧನಾತ್ಮಕತೆಯನ್ನು ಹೊಂದಿದೆ ಎಂದರೆ ಇಂದೇ ಭಗವಾನರು ರಾಜಗೃಹದಲ್ಲಿ ಈಗಲೇ ನುಡಿಯುವಂತಿದೆ. ನಿಜಕ್ಕೂ ಆ ಹಳ್ಳಿಯು ಅಥವಾ ಗಂಗಾತೀರದ ವಂಶವು ಸುಖವಾಗಿ ಇರುತ್ತದೆ. ಏಕೆಂದರೆ ಅಲ್ಲಿನ ಜನರು ಸಹಜನರ ಮೇಲೆ ಇಷ್ಟು ದಯಾಯುತ ಭಾವನೆಯಲ್ಲಿದ್ದಾರೆ. ಅವರ ಉಸಿರಿನಲ್ಲಿ ನ್ಯಾಯದ ಉದಾತ್ತ ಸ್ಫೂರ್ತಿ ಹರಿಯುತ್ತಿದೆ. ಈ ಸರಳ ನುಡಿರತ್ನಗಳಿಂದ ಕೇವಲ ಹಳ್ಳಿಯಷ್ಟೇ ಅಲ್ಲ, ಥೇಮ್ಸ್ ನದಿಯ ತೀರದಲ್ಲಿರುವ ನಾವು ಸಹಾ ಇಂದು ಇದರ ಆಚರಣೆಯಿಂದ ಸುಖಿಯಾಗಿರಬಹುದು".

ಧಮ್ಮವನ್ನು ಜೀವನದ ಹಾದಿಯಂತೆ ರೂಪಿಸುವ ಬದಲು, ಅದನ್ನು ತಾತ್ವಿಕ ಅರ್ಥವಾಗದ ಭಾಷೆಯಾಗಿ ಬೆಳೆಸಿದ್ದಾರೆ. ಧಮ್ಮವು ತಾರ್ಕಿಕತೆಯ ಮತ್ತು ವಾದವಿವಾದದ ವಿಷಯವಾಗಿಬಿಟ್ಟಿದೆ. ಮೂಢನಂಬಿಕೆಯ ಆಚರಣೆಗಳು, ಯಕ್ಷಿಣಿವಿದ್ಯೆ ಮತ್ತು ರಹಸ್ಯವಾದಗಳಿಂದ ಕೆಲವರು ತಮ್ಮ ಧಮ್ಮ ಮೇಲೆಂದು ಪರರನ್ನು ಕೀಳಾಗಿ ಕಾಣುತ್ತಾರೆ. ಕೆಲವರಂತು ಧಮ್ಮವನ್ನು ತಮ್ಮ ಲೋಭದ ಪ್ರಾಪ್ತಿಗೆ ಬಳಸುತ್ತ ಚಿನ್ನ ಅಧಿಕಾರ ಪಡೆಯುತ್ತಿದ್ದಾರೆ.

ಈ ರೀತಿಯ ವ್ಯರ್ಥ ವಿಷಯಗಳನ್ನು ಧಮ್ಮದ ಹೆಸರಿನಲ್ಲಿ ಕೆಲವರು ತರುತ್ತಾರೆ. ಇಂತಹ ವಿಷಯಗಳೇ ಧಮ್ಮ ಎಂದು ಪರಿಚಯಿಸುತ್ತಾರೆ. ಆದರೆ ವಿಚಾರಪರರು ಇದೆಲ್ಲಾ ಸೂರ್ಯನನ್ನು ಆವರಿಸಿರುವ ಮೋಡದಂತೆ ಎಂದು ತಿಳಿದು ಅವನ್ನು ಪಕ್ಕಕ್ಕೆ ತಳ್ಳಿ ನಿಜವಾದ ಧಮ್ಮಸಾರವನ್ನು ಅರಿತು ಪರಮಾರ್ಥದ ಜೀವನ ನಡೆಸುತ್ತಾರೆ ಮತ್ತು ನಿಜವಾದ ಧಮ್ಮದ ಮೌಲ್ಯಗಳು ಮುಂದೆ ಹೆಚ್ಚು ಹೆಚ್ಚು ಅವಶ್ಯಕತೆಯಿಂದ ಸ್ಪಷ್ಟವಾಗಿ ಪ್ರಕಾಶಿಸುವುದು.

**ಒಂದು ಬೆಳ್ಳಿ (ಆಶಾ) ರೇಖೆ**

"ಧಮ್ಮದಿಂದ ಮಾನವತೆಗೆ ಶಾಂತಿಯು ಸಿಗುವುದೇ?" ಇದು ನಿಜಕ್ಕೂ ಇಂದು ಅಸಂಬದ್ಧ ಪ್ರಶ್ನೆಯಾಗಿದೆ. ವಿಶೇಷವಾಗಿ, ಇಂದಿನ ಬೆಳವಣಿಗೆಗಳನ್ನು ವಿಶ್ವದ ಹಲವೆಡೆಗಳಲ್ಲಿ ಗಮನಿಸಿದರೆ ಧಮ್ಮವನ್ನು ರಣರಂಗಕ್ಕೆ ತೆಗೆದುಕೊಂಡು ಹೋಗಿದ್ದಾರೆ.

ಭೌತಿಕವಾದ, ಆಷಾಢಭೂತಿತನ, ಮತಾಂಧತೆ, ಧರ್ಮದ ಹೆಸರಿನಲ್ಲಿ ಸಾಮೂಹಿಕ ಕಗ್ಗೊಲೆ, ಅಷ್ಟೇ ಏಕೆ ಇತಿಹಾಸದಲ್ಲಿ ಅತ್ಯಂತ ಅನರ್ಥಗಳಾಗಿರುವುದು ಧರ್ಮದ ಹೆಸರಿನಲ್ಲಿಯೇ. ಧರ್ಮದ ಹೆಸರಿನಲ್ಲಿ ವಿಶ್ವಮಟ್ಟದ ಸಮ್ಮೇಳನಗಳನ್ನು ಮಾಡುತ್ತಾರೆ. ವಿಶ್ವಶಾಂತಿ, ಸಾರ್ವತ್ರಿಕ ಸೋದರತ್ವ, ಧಾರ್ಮಿಕ ಸೌಹಾರ್ದತೆಯನ್ನು ಸಾರುತ್ತಾರೆ. ಆದರೆ ಪುನಃ ಪುನಃ ತಪ್ಪುಗಳನ್ನು ಪುನಾವರ್ತಿಸುತ್ತಾ ಹಳೆಯ ಹಾದಿಯನ್ನೇ ಹಿಡಿದು ದುರಂತಗಳನ್ನು ಉಂಟುಮಾಡುವುದು ನೋಡಿದರೆ ಇವೆಲ್ಲಾ ದುರಂತಗಳನ್ನು ಉಂಟು ಮಾಡುವುದು ನೋಡಿದರೆ ಇವೆಲ್ಲಾ ಮಹಾವಂಚನೆ ಮತ್ತು ಮಾನವ ಸಮಾಜಕ್ಕೆ ಅತ್ಯಂತ ಅಪಮಾನಕರ ಎಂದು ಗೊತ್ತಾಗುತ್ತದೆ".

ಇಂತಹ ವಿವೇಚನಾರಹಿತ ಕೃತ್ಯಗಳನ್ನು ಧಮ್ಮದ ಹೆಸರಿನಲ್ಲಿ ಸಹಾಯ ಮಾಡುವುದು ನಿಜಕ್ಕೂ ಮಾನವನ ಘನತೆಗೆ ಮತ್ತು ಗಾಂಭೀರ್ಯಕ್ಕೆ ವಿರುದ್ಧವಾಗಿದೆ.

ಶಾಂತಿಗಾಗಿ ರಣರಂಗಗಳಲ್ಲಿ ಯುದ್ಧ ಮಾಡುವುದು ಸರಿಯಲ್ಲ. ಶಾಂತಿಗಾಗಿ ಒಬ್ಬನು ತನನ್ನೇ ಜಯಿಸಬೇಕಾಗಿದೆ ಹೊರತು ಪರರಿಗೆ ಸೋಲಿಸಿ ಶಿಕ್ಷೆ ನೀಡುವುದು ಅಲ್ಲ. ಖಂಡಿತವಾಗಿ ನೆನಪಿಡಿ, ಇದು ಸ್ವಾರ್ಥರಹಿತತೆಯ ಅಂಶವಾಗಿದೆ. ಕೆಲವರು ಅಧಿಕಾರಕ್ಕಾಗಿ ಅಥವಾ ಚಿನ್ನಕ್ಕಾಗಿ ಧರ್ಮಯುದ್ಧಗಳನ್ನೇ ಮಾಡಿಸಿಬಿಡುತ್ತಾರೆ. ಇದು ಧರ್ಮದ ನೀಡುವಿಕೆಯಾಗಿಲ್ಲ. ಆದ್ದರಿಂದ ಇದನ್ನು ಚಿಂತನಕಾರರಿಗೆ ಮತ್ತು ಶಾಂತಿಪ್ರಿಯ ವ್ಯಕ್ತಿಗಳಿಗೆ ಬಿಡೋಣ, ಅವರೇ ನಿರ್ಧರಿಸಲಿ. "ಧಮ್ಮದ ಹೆಸರಿನಲ್ಲಿ ಯುದ್ಧ ಬಯಸುವುದು ನ್ಯಾಯವೇ" ಎಂದು. ಹಾಗೆಯೇ "ಧರ್ಮವು ಯುದ್ಧಗಳಿಂದ ಹಾಗು ರಕ್ತಪಾತದಿಂದ ಪೂರ್ಣವಾಗಿ ದೂರವಿರುತ್ತದೆಯೇ" ಎಂದು ಚಿಂತಿಸಿ ನಿರ್ಧರಿಸಲಿ.

ಒಂದುವೇಳೆ ಜನರು ನಿಜವಾಗಿಯು ಶಾಂತಿ ಅನ್ವೇಷಕರು ಮತ್ತು ಸುಖದ ಆನಂದಕರು ಆಗಿದ್ದರೆ, ತಮ್ಮ ಹಾಗು ಪರರ ಸುಖಶಾಂತಿಯ ಅಪೇಕ್ಷರು ಆಗಿದ್ದರೆ, ಅಂತಹ ಸ್ಥಿತಿಯು ನಿಧಾನವೇನು ಅಲ್ಲ. ಪ್ರತಿಯೊಂದು



ಮೋಡವು ಮಿನುಗುವ ಬೆಳ್ಳಿಯ ರೇಖೆ ಹೊಂದಿರುತ್ತದೆ. ಧಮ್ಮದ ತತ್ವಗಳು ಮತ್ತು ಬೋಧನೆಗಳು ಮಾನವತೆಯ ನಿರ್ಮಾಣಕ್ಕೆ ಅರ್ಹವಾಗಿವೆ ಮತ್ತು ಬದುಕಿರುವಾಗಲೇ ಒಬ್ಬನು ಅನುಭವಿಸಿ, ಸಾಕ್ಷಾತ್ಕರಿಸಿ, ಅರಿಯು ವಂತಹದ್ದಾಗಿದೆ (ಅಂತಹ ಸಾಮರ್ಥ್ಯ ಧಮ್ಮ ಪಡೆದಿದೆ).

"ಪ್ರತಿಯೋರ್ವರಿಗೂ ಸಂಪೂರ್ಣ ವಿಮುಕ್ತಿಯ ದ್ವಾರಗಳು ತೆರೆಯಲಾಗಿದೆ".

"ಒಬ್ಬನು ಯುದ್ಧಗಳಲ್ಲಿ ಸಾವಿರ ಬಾರಿ ಸಾವಿರ ಜನರನ್ನು ಗೆಲ್ಲಬಹುದು. ಆದರೂ ತನ್ನನ್ನು ಜಯಿಸಿದವನು ಎಲ್ಲಾ ಜಯಶಾಲಿಗಳಿಗಿಂತ (ಎಲ್ಲಾ ವೀರರಿಗಿಂತ) ಸರ್ವಶ್ರೇಷ್ಠ". – ಬುದ್ಧ – ಧಮ್ಮಪದ 103